ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಜನವರಿ ೪ನೇ ವಾರ**

19-01-2026 TO 24-01-2026

## ಚೀನಾದ ಜನನ ಪ್ರಮಾಣದಲ್ಲಿ ಭಾರಿ ಇಳಿಕೆ

- ಡಬ್ಲ್ಯುಎಚ್‌ಒದಿಂದ ಅಮೆರಿಕ ಹೊರಕ್ಕೆ
- ವೆನೆಜುವೆಲಾ: ತೈಲ ಮಸೂದೆ ಚರ್ಚೆ
- ಅರಾವಳಿ: ತಜ್ಞರ ಸಮಿತಿ ರಚನೆ
- ರಾಜ್ಯಪಾಲ-ಸರ್ಕಾರ ಸಂಘರ್ಷ

## ❖ ಕೈಕೊಡಲಿ, ಕಂಬದ ಬೋಧಿಗೆ ಪತ್ತೆ

**ಸಂದರ್ಭ: ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಉತ್ಖನನ ಮುಂದುವರೆದಿದ್ದು, ನವಶಿಲಾಯುಗದ ಕೈಕೊಡಲಿ ಮತ್ತು ಕಂಬದ ಬೋಧಿಗೆ ಪ್ರಾಚ್ಯ ಅವಶೇಷ ಸೋಮವಾರ ಸಿಕ್ಕಿದೆ.**

- 'ಕೈ ಕೊಡಲಿ ಆಕಾರದ ಕಲ್ಲು ಮತ್ತು ಕಂಬದ ಮೇಲೆ ಆಸರೆಯಾಗುವ ಬೋಧಿಗೆ ಕುರಿತು ತಜ್ಞರು ಅಧ್ಯಯನ ನಡೆಸಿದ ಬಳಿಕ * ಹೆಚ್ಚಿನ ವಿವರಗಳು ಸಿಗಲಿವೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾ-ಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದುಪಾಟೀಲ ತಿಳಿಸಿದ್ದಾರೆ.
- 'ಉತ್ಖನನದಲ್ಲಿ.24 ಮಹಿಳೆಯರು ಮತ್ತು 10ಪುರುಷರು ತೊಡಗಿದ್ದಾರೆ.ಈಗಿನ 2374 ದಿನಗೂಲಿ ಸಾಕಾಗುವುದಿಲ್ಲ. ಅದನ್ನು ಕನಿಷ್ಠ 500ಕ್ಕೆ ಏರಿಕೆ ಮಾಡಬೇಕು' ಎಂದು ಉತ್ಖನನ ಕಾರ್ಮಿಕರು ಕೋರಿದ್ದಾರೆ.

## ❖ ₹18.17 ಲಕ್ಷ ಕೋಟಿ ವ್ಯಾಪಾರ ಭಾರತ–ಯುಎಇ ಗುರಿ

**ಸಂದರ್ಭ: ಭಾರತ ಮತ್ತು ಯುಎಇ 2032ರವರೆಗೆ ಪ್ರತಿ ವರ್ಷವೂ ಸುಮಾರು ₹18.17 ಲಕ್ಷ ಕೋಟಿ (200 ಬಿಲಿಯನ್ ಡಾಲರ್) ವ್ಯಾಪಾರ ನಡೆಸುವ ಗುರಿ ನಿಗದಿಪಡಿಸಿವೆ.**


- ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಮೂರೂವರೆ ಗಂಟೆಗಳಿಗಾಗಿ ಭಾರತಕ್ಕೆ ಸೋಮವಾರ ಭೇಟಿ ನೀಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಅಧ್ಯಕ್ಷರನ್ನು ವಿಮಾನ ನಿಲ್ದಾಣದಲ್ಲಿಯೇ ಬರ ಮಾಡಿಕೊಂಡು, ತಬ್ಬಿಕೊಂಡರು.
- ಇವರೊಂದಿಗೆ ಅಧ್ಯಕ್ಷರ ತಾಯಿ ಶೇಖ್ ಫಾತಿಮಾ ಬಿಂತ್ ಮುಬಾರಕ್ ಅಲ್ ಕೆತ್ತಿ ಅವರೂ ಆಗಮಿಸಿದ್ದರು. ಇಬ್ಬರನ್ನೂ ಪ್ರದಾನಿ ನಮ್ಮ ನಿವಾಸಕ್ಕೆ ಕರೆದೊಯ್ದು ಸತ್ಕರಿಸಿದರು. ಇಬ್ಬರಿಗೂ ಉಡುಗೊರೆಗಳನ್ನೂ ನೀಡಿದರು. ತಾಯಿ
- ಫಾತಿಮಾ ಅವರಿಗೆ ಕಾಶ್ಮೀರದ ಪಶ್ಮಿನಾ ಶಾಲನ್ನು ಮತ್ತು ಕಾಶ್ಮೀರ ಕಣಿವೆಯಲ್ಲಿ ಬೆಳೆದ ಕೇಸರಿಯನ್ನು ತೆಲಂಗಾಣದಲ್ಲಿ ತಯಾರಿಸಿದ ಬೆಳ್ಳಿ ಬಾಕ್ಸ್ ಗಳಲ್ಲಿ ಇರಿಸಿ ಪ್ರಧಾನಿ ಮೋದಿ ಉಡುಗೊರೆ ನೀಡಿದರು.
- ಪ್ರಧಾನಿ ನಿವಾಸದಲ್ಲಿಯೇ ಇಬ್ಬರು ನಾಯಕರು ಹಲವು ವಿಚಾರಗಳ ಕುರಿತು ಮಾತುಕತೆ ನಡೆಸಿದರು.
- ಇಂಧನ, ಬಾಹ್ಯಾಕಾಶ ಮತ್ತು ನಾಗರಿಕ ಪರಮಾಣು ವಲಯದಲ್ಲಿ ಪರಸ್ಪರ ಸಹಕಾರ ನೀಡುವ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಾಹಿತಿ ನೀಡಿದರು. ಪ್ರತಿ ವರ್ಷವೂ 5 ಲಕ್ಷ ಟನ್‌ನಷ್ಟು ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಭಾರತಕ್ಕೆ ಪೂರೈಕೆ ಮಾಡುವ ದೀರ್ಘಾವಧಿ ಒಪ್ಪಂದ ಮಾಡಿಕೊಳ್ಳಲಾಯಿತು.

## ❖ ಭಾರತ: 2030ಕ್ಕೆ ಮೇಲ್ಮಧ್ಯಮ ಆದಾಯ

**ಸಂದರ್ಭ: ಭಾರತದ ತಲಾವಾರು ಒಟ್ಟು ರಾಷ್ಟ್ರೀಯ ಆದಾಯದ ಬಗ್ಗೆ ಎಸ್‌ಬಿಐ ಅಂದಾಜು ಇನ್ನು ನಾಲ್ಕು ವರ್ಷಗಳಲ್ಲಿ ಭಾರತವು ಮೇಲ್ಮಧ್ಯಮ ವರ್ಗದ ಆದಾಯ ಹೊಂದಿರುವ ದೇಶವಾಗಿ ಪರಿವರ್ತನೆ ಕಾಣಲಿದೆ, ಆ ಮೂಲಕ ಚೀನಾ ಮತ್ತು ಇಂಡೋನೇಷ್ಯಾ ದೇಶಗಳ ಸಾಲಿಗೆ ಸೇರಲಿದೆ ಎಂದು ಎಸ್‌ಬಿಐ ರಿಸರ್ಚ್‌ನ ವರದಿಯು ಅಂದಾಜು ಮಾಡಿದೆ.**

Dr. Rajkumar IAS Academy

- ಅಷ್ಟೇ ಅಲ್ಲ, 2028ರ ಸುಮಾರಿಗೆ ಭಾರತವು ಜರ್ಮನಿಯನ್ನು ಹಿಂದಿಕ್ಕಿ ವಿಶ್ವದ ಮೂರನೆಯ ಅತಿದೊಡ್ಡ ಅರ್ಥ ವ್ಯವಸ್ಥೆಯಾಗಿ ಬೆಳೆಯಲಿದೆ ಎಂದೂ ಹೇಳಿದೆ. ಮೊದಲ ಸ್ಥಾನದಲ್ಲಿ ಅಮೆರಿಕ. ಎರಡನೆಯ ಸ್ಥಾನದಲ್ಲಿ ಚೀನಾ ಇರಲಿವೆ. 1990ರಲ್ಲಿ 14ನೇ ಸ್ಥಾನದಲ್ಲಿದ್ದ ಭಾರತದ ಅರ್ಥ ವ್ಯವಸ್ಥೆಯ ಗಾತ್ರವು 2025ರಲ್ಲಿ ನಾಲ್ಕನೆಯ ಸ್ಥಾನಕ್ಕೆ ಏರಿಕೆ ಕಂಡಿದೆ.
- ತಲಾವಾರು ಒಟ್ಟು ರಾಷ್ಟ್ರೀಯ ಆದಾಯವನ್ನು ಅಮೆರಿಕದ ಡಾಲರ್ ಲೆಕ್ಕದಲ್ಲಿ ಅಂದಾಜಿಸಿ ದೇಶಗಳನ್ನು ಕಡಿಮೆ ಆದಾಯ, ಕೆಳ ಮಧ್ಯಮ ಆದಾಯ, ಮೇಲ್ಮಧ್ಯಮ ಆದಾಯ, ಹೆಚ್ಚಿನ ಆದಾಯದ ರಾಷ್ಟ್ರಗಳು ಎಂದು ವಿಶ್ವ ಬ್ಯಾಂಕ್ ವರ್ಗೀಕರಿಸಿದೆ.




- 1990 ರಲ್ಲಿ ವಿಶ್ವ ಬ್ಯಾಂಕ್ ಒಟ್ಟು 218 ದೇಶಗಳನ್ನು ಹೀಗೆ ವರ್ಗೀಕರಿಸಿತ್ತು. 51 ದೇಶಗಳು ಕಡಿಮೆ ಆದಾಯದ ವರ್ಗದಲ್ಲಿ ಇದ್ದವು, 56 ದೇಶಗಳು ಕೆಳ ಮಧ್ಯಮ ಆದಾಯದ ವರ್ಗದಲ್ಲಿ, 29 ದೇಶಗಳು ಮೇಲ್ಮಧ್ಯಮ ಆದಾಯದ ವರ್ಗದಲ್ಲಿ ಹಾಗೂ 39 ದೇಶಗಳು ಹೆಚ್ಚಿನ ಆದಾಯದ ವರ್ಗದಲ್ಲಿ ಇದ್ದವು.
- 2024 ಪ್ರಕಟವಾಗಿರುವ ಅಂಕಿ ಅಂಶಗಳ ಪ್ರಕಾರ 26 ದೇಶಗಳು ಮಾತ್ರವೇ ಕಡಿಮೆ ಆದಾಯದ ವರ್ಗದಲ್ಲಿವೆ. 87 ದೇಶಗಳು ಹೆಚ್ಚಿನ ಆದಾಯದ ವರ್ಗಕ್ಕೆ ಬಂದಿವೆ.
- ಕಡಿಮೆ ಆದಾಯದ ವರ್ಗದಲ್ಲಿ ಇದ್ದ ಭಾರತವು ಕೆಳ ಮಧ್ಯಮ ಆದಾಯ ವರ್ಗಕ್ಕೆ ಬರಲು 60 ವರ್ಷ ತೆಗೆದುಕೊಂಡಿತು. 1962ರಲ್ಲಿ 90 ಡಾಲರ್‌ನಷ್ಟು ಇದ್ದ ಭಾರತದ ತಲಾ ವಾರು ಒಟ್ಟು ರಾಷ್ಟ್ರೀಯ ಆದಾಯವು 2007ರಲ್ಲಿ 910 ಡಾಲರ್‌ಗೆ ಹೆಚ್ಚಾಗಿದೆ. ಅದು ವಾರ್ಷಿಕವಾಗಿ ಶೇ 5.3ರಷ್ಟು ಬೆಳವಣಿಗೆ ಕಂಡಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.
- 'ವಿಕಸಿತ ಭಾರತ ಗುರಿಯ ಪ್ರಕಾರ 2047ರ ವೇಳೆಗೆ ದೇಶದ ತಲಾವಾರು ಒಟ್ಟು ರಾಷ್ಟ್ರೀಯ ಆದಾಯವನ್ನು 13.936 ಡಾಲರ್‌ಗೆ ಹೆಚ್ಚಿಸಬೇಕು ಎಂದಾದರೆ, ದೇಶದ ತಲಾವಾರು ಒಟ್ಟು ರಾಷ್ಟ್ರೀಯ ಆದಾಯವು ಶೇ 7.5ರಷ್ಟು ಸಂಯುಕ್ತ ವಾರ್ಷಿಕ ಬೆಳವಣಿಗೆ ದರವನ್ನು (ಸಿಎಜಿಆರ್) ದಾಖಲಿಸಬೇಕು. ರ ಗುರಿಯನ್ನು ಸಾಧಿಸಲು ಸಾಧ್ಯವಿದೆ ಎಂಬಂತೆ ಕಾಣುತ್ತಿದೆ. ಏಕೆಂದರೆ 2001ರಿಂದ 2024ರವರೆಗೆ ಅದು ಶೇ 8.3ರಷ್ಟು ಸಿಎಜಿಆರ್ ದರದಲ್ಲಿ ಬೆಳೆದಿದೆ' ಎಂದು ವರದಿ ವಿವರಿಸಿದೆ.

## ❖ ಗಾಜಾ ಶಾಂತಿ ಮಂಡಳಿ: ರಷ್ಯಾಕ್ಕೆ ಆಹ್ವಾನ

**ಸಂದರ್ಭ: ಹಮಾಸ್ ಬಂಡುಕೋರರು ಮತ್ತು ಇಸ್ರೇಲ್ ಮಧ್ಯದ ಯುದ್ಧ ಅಂತ್ಯಗೊಳಿಸುವ ಮತ್ತು ಅಮೆರಿಕದ ಪ್ರಸ್ತಾವಿತ ಕದನ ವಿರಾಮ ಒಪ್ಪಂದದ 2ನೇ ಹಂತದ ಅನ್ವಯ ರೂಪಿಸಲಾಗಿರುವ 'ಗಾಜಾ ಶಾಂತಿ ಮಂಡಳಿ' ಸೇರಲು ರಷ್ಯಾಕ್ಕೆ ಅಮೆರಿಕವು ಸೋಮವಾರ ಅಮಂತ್ರಣ ನೀಡಿದೆ.**

- "ಶಾಂತಿ ಮಂಡಳಿಯನ್ನು ಸೇರಿಕೊಳ್ಳುವಂತೆ ವಾದಿಮಿರ್ ಪುಟಿನ್ ಅವರಿಗೆ ಅಮಂತ್ರಣ ಬಂದಿದೆ. ಇದರಲ್ಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗು ವುದು. ಆ ಬಳಿಕ ಅಮೆರಿಕದೊಂದಿಗೆ ಮಾತುಕತೆ ನಡೆಸಿ, ಸ್ಪಷ್ಟತೆ ಪಡೆದುಕೊಳ್ಳಲಾಗುವುದು' ಎಂದು ರಷ್ಯಾ ಪ್ರತಿಕ್ರಿಯಿಸಿದೆ.
- ಭಾರತದ ಪ್ರಧಾನಿ ನರೇಂದ್ರ ಮೋದಿ, ಪಾಕಿಸ್ತಾನದ ಪ್ರಧಾನಿ ಶಹಬಾಜ್ ಶರೀಫ್ ಅವರನ್ನೂ ಅಮೆರಿಕ ಆಹ್ವಾನಿಸಿದೆ. 'ಈ ಮಂಡಳಿಯ ಮೂಲಕ ವಿಶ್ವ ಸಂಸ್ಥೆಗಿಂತಲೂ ವಿಶಾಲ ವ್ಯಾಪ್ತಿ ಹೊಂದಿರುವ ಅಂತರರಾಷ್ಟ್ರೀಯ ಸಂಸ್ಥೆಯೊಂದನ್ನು ಹುಟ್ಟುಹಾಕಲು ಅಮೆರಿಕ ಯತ್ನಿಸುತ್ತಿದೆ' ಎಂದು ರಷ್ಯಾದ ಸುದ್ದಿ ವಾಹಿನಿಯೊಂದು ವಿಶ್ಲೇಷಿಸಿದೆ.
- ಈ ಮಂಡಳಿಯು ಗಾಜಾದಲ್ಲಿ ಸ್ಥಿರತೆ ತರುವ ಉದ್ದೇಶ ಹೊಂದಿದ್ದರೂ, ಜಗತ್ತಿನ ಇತರ ಸಂಘರ್ಷ ನಿಲ್ಲಿಸುವಲ್ಲಿಯೂ ಈ ಮಂಡಳಿ ಕಾರ್ಯನಿರ್ವಹಿಸಲಿದೆ ಎನ್ನುವಂತೆ ಅಮೆರಿಕವು ಬಿಂಬಿಸುತ್ತಿದೆ ಎನ್ನಲಾಗಿದೆ.

## ❖ ಚೀನಾದ ಜನನ ಪ್ರಮಾಣದಲ್ಲಿ ಭಾರಿ ಇಳಿಕೆ


**ಸಂದರ್ಭ: ಚೀನಾವು ಜಗತ್ತಿನ ದೊಡ್ಡಣ್ಣನಾಗುವ ಯತ್ನದಲ್ಲಿದೆ. ಆದರೆ, ಇದನ್ನು ಸಾಧಿಸಲು ಬೇಕಿರುವ ಕಾರ್ಮಿಕ ವರ್ಗದ ಕೊರತೆ ದೊಡ್ಡ ಮಟ್ಟದಲ್ಲಿದೆ. ದಶಕದಿಂದ ರೂಢಿಸಿಕೊಂಡಿರುವ ಕುಟುಂಬಕ್ಕೊಂದು ಮಗುವಿನ ಮಿತಿಯೇ ಇದಕ್ಕೆ ಮುಖ್ಯ ಕಾರಣ. ಈ ಮಿತಿಗೆ ಒಗ್ಗಿಕೊಂಡಿರುವ ಎರಡು ತಲೆಮಾರು, ಹೆಚ್ಚು ಮಕ್ಕಳು ಹೊಂದಲು ಮುಂದಾಗುತ್ತಿಲ್ಲ. ಇದು ಸರ್ಕಾರವನ್ನು ಚಿಂತೆಗೀಡು ಮಾಡಿದೆ.**

- ದೇಶದ ಜನಸಂಖ್ಯೆಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸರ್ಕಾರವು ಸೋಮವಾರ ಬಿಡುಗಡೆ ಮಾಡಿದೆ.
- ಚೀನಾದ ಒಟ್ಟು ಜನಸಂಖ್ಯೆಯ ಶೇಕಡ 23ರಷ್ಟು ಜನರು 60 ವರ್ಷ ಮೇಲ್ಪಟ್ಟ ವೃದ್ಧರೇ ಆಗಿದ್ದಾರೆ. 1949ರಿಂದ ಇಲ್ಲಿಯವರೆಗಿನ ಲೆಕ್ಕಾಚಾರದ ಲ್ಲಿ ಚೀನಾದ ಜನನ ಪ್ರಮಾಣವು 2025ರಲ್ಲಿ ತೀವ್ರವಾಗಿ ಕುಸಿದಿದೆ. ಸದ್ಯ ಈಗ ಪ್ರತಿ ಸಾವಿರ ಜನರಿಗೆ ಜನನ ಪ್ರಮಾಣ ಶೇ 5.63ರಷ್ಟಿದೆ.

## ❖ ಟೆನಿಸ್: ಸೃಷ್ಟಿಗೆ ಕಿರೀಟ

**ಸಂದರ್ಭ: ಬೆಂಗಳೂರಿನ ಸೃಷ್ಟಿ ಕಿರಣ್ ಅವರು ಮೆಕ್ಸಿಕೊದಲ್ಲಿ ಮುಕ್ತಾಯಗೊಂಡ ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಜೂನಿಯರ್ಸ್ ಜೆ30 ಟೂರ್ನಿಯಲ್ಲಿ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.**

- 13 ವರ್ಷದ ಸೃಷ್ಟಿ ಫೈನಲ್‌ನಲ್ಲಿ 6-4, 6-4ರಿಂದ ಮೆಕ್ಸಿಕೊದ 17 ವರ್ಷದ ತಮಾರಾ ಹರ್ಮನ್ ಅವರನ್ನು ಮಣಿಸಿದರು.
- ಭಾರತದ ಆಟಗಾರ್ತಿ ಸೆಮಿಫೈನಲ್‌ನಲ್ಲಿ 6-4. 6-0ಯಿಂದ ಸ್ಥಳೀಯ ಆಟಗಾರ್ತಿ ಮಿರಾಂದಾ ಸೋಫಿಯಾ ಅವರನ್ನು ಸೋಲಿಸಿದ್ದರು.

## ❖ ಜಿನಚಿತ್ರವಿರುವ ಕಲ್ಲಿನ ಪೀಠ ಪತ್ತೆ

**ಸಂದರ್ಭ: ಲಕ್ಕುಂಡಿ ಗ್ರಾಮದಲ್ಲಿನಡೆದಿರುವ ಉತ್ಖನನದಲ್ಲಿ ನವ ಶಿಲಾಯುಗದ ಬೂದು ಬಣ್ಣದ ಮಡಿಕೆ, ಜಿನ ಚಿತ್ರವಿರುವ ಕಲ್ಲಿನ ಪೀಠ ಸಿಕ್ಕಿದೆ.**

- 'ದೊಡ್ಡಗಾತ್ರದ ಒಡೆದ ಮಡಿಕೆಯ ಅರ್ಧಭಾಗದ ಜತೆಗೆ ಎರಡು ಮೂರು ಕವಡೆ ಸಿಕ್ಕಿವೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ. ಉತ್ಖನನ ಕೆಲಸ ಐದೂವರೆ ಅಡಿ ಆಳದವರೆಗೆ ನಡೆದಿದೆ. ಒಟ್ಟು 34 ಮಂದಿ ಕಾರ್ಮಿಕರು ಉತ್ಖನನ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.
- ಗ್ರಾಮದಲ್ಲಿ ಹಲವು ದೇವಸ್ಥಾನ ಗಳಿವೆ. ಅವುಗಳನ್ನೇ ಕೆಲವರು ಮನೆಗಳನ್ನಾಗಿ ಮಾಡಿಕೊಂಡಿದ್ದಾರೆ. ಚೌಕಿಮಠ ಕುಟುಂಬದವರು ವಾಸಿಸುವ ಮನೆಯಲ್ಲಿ ದೇವಸ್ಥಾನವಿದ್ದು, ಐದು ತಲೆಮಾರಿನಿಂದ ಅಲ್ಲೇ ವಾಸವಿದ್ದಾರೆ.
- 'ಮಹಾಂತೇಶ್ವರಸ್ವಾಮಿಗೆ ಪೂಜಿಸುತ್ತ ವಾಸವಿದ್ದೇವೆ. ಇದು ಮಹಾಂತೇಶ್ವರ ಸ್ವಾಮಿ ಅಲ್ಲ; ಅರ್ಧ-ನಾರೀಶ್ವರ ಎಂದು ಇತಿಹಾಸಕಾರರು ಹೇಳಿದ್ದಾರೆ. ಜೀರ್ಣೋದ್ಧಾರಕ್ಕಾಗಿಮನೆ ಕೊಡಲು ಕೇಳಿದ್ದಾರೆ.ಸರ್ಕಾರ ಬೇರೆ ಕಡೆ ಜಾಗ, ಮನೆ ಕೊಟ್ಟರೆ ಹೋಗಲು ಸಿದ್ಧ' ಎಂದು ಕುಟುಂಬದ ಮುಖ್ಯಸ್ಥಶರಣಯ್ಯ ಚೌಕಿಮಠ ತಿಳಿಸಿದ್ದಾರೆ.

## ❖ ರಾಜ್ಯ ಪೊಲೀಸ್‌ಗೆ ತನಿಖಾಧಿಕಾರ

### ಕೇಂದ್ರ ನೌಕರರ ವಿರುದ್ಧದ ಲಂಚ ಅಥವಾ ಭ್ರಷ್ಟಾಚಾರ ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರಿ ನೌಕರರ ವಿರುದ್ಧದ ಲಂಚದ ಆರೋಪಗಳ ಕುರಿತು ರಾಜ್ಯಗಳ ಪೊಲೀಸರು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸಬಹುದು. ಇದಕ್ಕೆ ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ಅನುಮೋದನೆ ಅಥವಾ ಅನುಮತಿಯ ಅಗತ್ಯ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಲಂಚ, ಭ್ರಷ್ಟಾಚಾರ ಹಾಗೂ ದುರ್ವರ್ತನೆ ಆರೋಪಗಳನ್ನು ಎದುರಿಸುತ್ತಿರುವ ಕೇಂದ್ರ ಸರ್ಕಾರದ ನೌಕರರ ವಿರುದ್ಧ ರಾಜ್ಯ ಪೊಲೀಸರು ಪ್ರಕರಣ ದಾಖಲಿಸುವುದು ಅಥವಾ ತನಿಖೆ ಕೈಗೊಳ್ಳುವುದನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ (ಪಿ.ಸಿ ಕಾಯ್ದೆ) ಸೆಕ್ಷನ್ 17 ನಿರ್ಬಂಧಿಸುವುದಿಲ್ಲ' ಎಂದೂ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಸತೀಶ್ಚಂದ್ರ ಶರ್ಮಾ ಅವರು ಇದ್ದ ನ್ಯಾಯಪೀಠ ಈ ಕುರಿತ ಮೇಲ್ಮನವಿಯ ವಿಚಾರಣೆ ವೇಳೆ ಈ ಮಾತು ಹೇಳಿದೆ.

ನವಲ್‌ಕಿಶೋರ್ ಮೀನಾ ವಿರುದ್ಧ ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ಸಂಸ್ಥೆಯು (ಎಸಿಬಿ) ಪಿ.ಸಿ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಬಹುದು.

**ಮುಖ್ಯಾಂಶಗಳು**

- ಸಿಆರ್‌ಪಿಸಿ ಸೆಕ್ಷನ್ 2 'ಪೊಲೀಸ್ ಠಾಣೆ' ಕುರಿತು ವಿವರಿಸುತ್ತದೆ
- ಸಿಬಿಐಗೆ ಮಾತ್ರ ತನಿಖೆ ಅಧಿಕಾರ ಎಂಬುದು ತಪ್ಪು: ಪೀಠ
- ಹೈಕೋರ್ಟ್ ಆದೇಶ ಎತ್ತಿಹಿಡಿದ 'ಸುಪ್ರೀಂ'



ನವಲ್‌ಕಿಶೋರ್ ಕೇಂದ್ರ ಸರ್ಕಾರಿ ನೌಕರರಾಗಿದ್ದರೂ ಅವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸಲು ಈ ಕಾಯ್ದೆಯಡಿ ಅವಕಾಶ ಇದೆ ಎಂದು ರಾಜಸ್ಥಾನ ಹೈಕೋರ್ಟ್ ಕಳೆದ ವರ್ಷ ಅಕ್ಟೋಬರ್ 3ರಂದು ಆದೇಶಿಸಿತ್ತು.

ಹೈಕೋರ್ಟ್ ಆದೇಶ ಪ್ರಶ್ನಿಸಿ ನವಲ್‌ಕಿಶೋರ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಪೀಠ ವಜಾಗೊಳಿಸಿ, ಜನವರಿ 19ರಂದು ತೀರ್ಪು ನೀಡಿದೆ.

'ನವಲ್ ಕಿಶೋರ್ ಮೀನಾ ಪ್ರಕರಣದಲ್ಲಿ ರಾಜಸ್ಥಾನ ಹೈಕೋರ್ಟ್ ಸರಿಯಾದ ನಿಲುವು ತಳೆದಿದೆ' ಎಂದೂ ಪೀಠ ಹೇಳಿದೆ.

'ವಿವಿಧ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿ ತನಿಖೆ ನಡೆಸುವುದು ಸೇರಿ ಕಾನೂನು–ಸುವ್ಯವಸ್ಥೆಯು ರಾಜ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಸಾಮಾನ್ಯವಾಗಿ ಇಂತಹ ಪ್ರಕರಣಗಳ ತನಿಖೆಯನ್ನು ರಾಜ್ಯಗಳೇ ನಡೆಸುತ್ತವೆ' ಎಂದು ನ್ಯಾಯಪೀಠ ಹೇಳಿದೆ.

'ಆದರೆ, ತನಿಖೆ ವಿಚಾರದಲ್ಲಿ ಸಿಬಿಐ ಹಾಗೂ ರಾಜ್ಯ ಪೊಲೀಸ್ ನಡುವಿನ ಸಂಬಂಧ ಪರಸ್ಪರ ಪೂರಕ. ಸಿಬಿಐನ ನಿಯಮಗಳು ಹಾಗೂ ಸಿಬಿಐ ಮತ್ತು ರಾಜ್ಯ ಪೊಲೀಸ್ ನಡುವಿನ ಹೊಂದಾಣಿಕೆ ವಿಚಾರಕ್ಕೆ ಬಂದಾಗ, ಈ ಎರಡೂ ಸಂಸ್ಥೆಗಳು ಹಲವು ವಿಷಯಗಳಿಗೆ ಸಂಬಂಧಿಸಿ ಒಂದಕ್ಕೊಂದು ಸಹಕಾರ ಹಾಗೂ ಬೆಂಬಲ ನೀಡಬೇಕಾಗುತ್ತದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

**ನ್ಯಾಯಪೀಠ ಹೇಳಿದ್ದು**

- ಕೇಂದ್ರ ಸರ್ಕಾರ ಹಾಗೂ ಇದರ ಅಧೀನ ಸಂಸ್ಥೆಗಳ ನೌಕರರ ವಿರುದ್ಧ ಕೇಳಿ ಬರುವ ಲಂಚ/ಭ್ರಷ್ಟಾಚಾರ ಆರೋಪಗಳ ಕುರಿತು ಸಿಬಿಐ ತನಿಖೆ ನಡೆಸುತ್ತದೆ. ಸಿಬಿಐಗೆ, ದೆಹಲಿಯ ವಿಶೇಷ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆಯಡಿ ಈ ಅಧಿಕಾರ ನೀಡಲಾಗಿದೆ.
- ಸರ್ಕಾರಿ ನೌಕರರ ವಿರುದ್ಧದ ಲಂಚ/ಭ್ರಷ್ಟಾಚಾರ ಆರೋಪಗಳ ಕುರಿತು ರಾಜ್ಯ ಸರ್ಕಾರ ಅಧೀನದ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ತನಿಖೆ ನಡೆಸುತ್ತದೆ
- ಲಂಚ/ಭ್ರಷ್ಟಾಚಾರ ಆರೋಪಗಳ ಕುರಿತು ತನಿಖೆ, ವಿಚಾರಣೆ ನಡೆಸುವುದಕ್ಕೆ ಅಪರಾಧಿಕ ಪ್ರಕ್ರಿಯಾ ಸಂಹಿತೆ (ಈಗ ಬಿಎನ್‌ಎಸ್‌ಎಸ್) ಅವಕಾಶ ಕಲ್ಪಿಸುತ್ತದೆ. ಆದರೆ, ತನಿಖೆಗೆ ಸಂಬಂಧಿಸಿ ವಿಶೇಷ ಕಾಯ್ದೆಯು ಇದೆ ಎಂದ ಮಾತ್ರಕ್ಕೆ, ಸಿಆರ್‌ಪಿಸಿ (ಅಪರಾಧಿಕ ಪ್ರಕ್ರಿಯಾ ಸಂಹಿತೆ) ಕಾಯ್ದೆಯನ್ನು ಅನುಸರಿಸಬಾರದು ಎಂದರ್ಥವಲ್ಲ. ತನಿಖೆ ವಿಚಾರದಲ್ಲಿ ಸಿಆರ್‌ಪಿಸಿಯ ಸೆಕ್ಷನ್ 156 ಮುಖ್ಯವಾಗುತ್ತದೆ
- ಗಂಭೀರ ಪ್ರಕರಣಗಳ ಕುರಿತು ತನಿಖೆ ನಡೆಸುವುದಕ್ಕೆ ಯಾವುದೇ ಠಾಣೆಯ ಪೊಲೀಸ್ ಅಧಿಕಾರಿಗೆ ಸಿಆರ್‌ಪಿಸಿ ಸೆಕ್ಷನ್ 156 ಅಧಿಕಾರ ನೀಡುತ್ತದೆ. ಇದಕ್ಕೆ ಮ್ಯಾಜಿಸ್ಟ್ರೇಟ್ ಅವರ ಆದೇಶ ಬೇಕಾಗಿಲ್ಲ
- ಜಾಗೃತ ಮತ್ತು ಭ್ರಷ್ಟಾಚಾರ ನಿಗ್ರಹ ದಳ (ವಿಎಸಿಬಿ) ಕೂಡ ರಾಜ್ಯ ಪೊಲೀಸ್ ಇಲಾಖೆಯ ಭಾಗವೇ ಆಗಿದೆ. ಹೀಗಾಗಿ, ಭ್ರಷ್ಟಾಚಾರ ಕಾಯ್ದೆಯ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ಕುರಿತು ಪೊಲೀಸ್ ಇಲಾಖೆ ಇಲ್ಲವೇ ವಿಎಸಿಬಿ ತನಿಖೆ ನಡೆಸಬಹುದು
- ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಸೆಕ್ಷನ್ 17ರಲ್ಲಿ ಉಲ್ಲೇಖಿಸಿರುವಂತೆ ನಿರ್ದಿಷ್ಟ ಶ್ರೇಣಿಯ ಪೊಲೀಸ್ ಅಧಿಕಾರಿ ಮಾತ್ರ ತನಿಖೆ ನಡೆಸಬೇಕು



## ❖ ಎಫ್‌ಟಿಎ ಹೊಸ್ತಿಲಲ್ಲಿ ಭಾರತ-ಯುರೋಪ್

**ಸಂದರ್ಭ: ಎಲ್ಲ ಒಪ್ಪಂದಗಳ ತಾಯಿ ಎಂದು ಬಣ್ಣಿಸಿದ ಉರ್ಸುಲಾ ಫಾಂಡರ್ ಲೇಯನ್: ಭಾರತ ಮತ್ತು ಐರೋಪ್ಯ ಒಕ್ಕೂಟವು 'ಐತಿಹಾಸಿಕ ವ್ಯಾಪಾರ ಒಪ್ಪಂದ'ದ ಹೊಸ್ತಿಲಿನಲ್ಲಿ ನಿಂತಿವೆ ಎಂದು ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ಹೇಳಿದ್ದಾರೆ.**

- ಈ ಒಪ್ಪಂದವು ಜಾಗತಿಕ ಒಟ್ಟು ಆಂತರಿಕ ಉತ್ಪಾದನೆ-ಯಲ್ಲಿ (ಜಿಡಿಪಿ) ಸರಿಸುಮಾರು ಶೇಕಡ 25ರಷ್ಟು ಪಾಲು ಹೊಂದಿದ, ಇನ್ನೂರು ಕೋಟಿ ಜನರು ಇರುವ ಮಾರುಕಟ್ಟೆಯನ್ನು ಸೃಷ್ಟಿಸಲಿದೆ ಎಂದು ಅವರು ತಿಳಿಸಿದ್ದಾರೆ.
- ಐರೋಪ್ಯ ಮಂಡಳಿಯ ಅಧ್ಯಕ್ಷ ಆ್ಯಂಟೊನಿಯೊ ಕೋಸ್ಟಾ ಮತ್ತು ಫಾಂಡರ್ ಲೇಯನ್ ಅವರು ಜನವರಿ 25ರಿಂದ 27ರವರೆಗೆ ಭಾರತಕ್ಕೆ ಭೇಟಿ ನೀಡಲಿದ್ದಾರೆ. ಅವರು ಗಣರಾಜ್ಯೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗಿಯಾಗಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.
- ಜನವರಿ 27ರಂದು ನಡೆಯಲಿರುವ ಭಾರತ-ಐರೋಪ್ಯ ಒಕ್ಕೂಟ ಶೃಂಗದ ಸಂದರ್ಭದಲ್ಲಿ, ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಪೂರ್ಣಗೊಂಡ ಮಾತುಕತೆಗಳು ಕಡೆಯ ರುವುದನ್ನು ಎರಡೂ ಪ್ರಮುಖರು ಘೋಷಿಸುವ ನಿರೀಕ್ಷೆ ಇದೆ.
- ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆ ಕಾರ್ಯಕ್ರಮ ದಲ್ಲಿ ಮಾತನಾಡಿದ ಫಾಂಡರ್ ಲೇಯನ್ ಅವರು, 'ಇಂದು ಬೆಳವಣಿಗೆ ಕಾಣುತ್ತಿರುವ ಕೇಂದ್ರಗಳ ಜೊತೆ ಹಾಗೂ ಈ ಶತಮಾನದ ಆರ್ಥಿಕ ಶಕ್ತಿಕೇಂದ್ರಗಳ ಜೊತೆ ವ್ಯಾಪಾರ ವಹಿವಾಟು ನಡೆಸಲು ಯುರೋಪ್ ಬಯಸುತ್ತದೆ' ಎಂದು ಹೇಳಿದ್ದಾರೆ.
- 'ನಾನು ಭಾರತಕ್ಕೆ ತೆರಳಲಿದ್ದೇನೆ. ಅಲ್ಲಿ ಮಾಡಲು ಕೆಲಸಗಳು ಇನ್ನೂ ಇವೆ. ಆದರೆ ನಾವು ಐತಿಹಾಸಿಕ ವ್ಯಾಪಾರ ಒಪ್ಪಂದವೊಂದರ ಹೊಸ್ತಿಲಿನಲ್ಲಿ ನಿಂತಿದ್ದೇವೆ. ಇದನ್ನು ಕೆಲವರು ಎಲ್ಲ ಒಪ್ಪಂದಗಳ ತಾಯಿ ಎಂದು ಕರೆಯುತ್ತಿ-ದ್ದಾರೆ...'ಎಂದು ಅವರು ಹೇಳಿದ್ದಾರೆ.
- ಐರೋಪ್ಯ ಒಕ್ಕೂಟವು ಭಾರತದ ಪಾಲಿನ ಅತಿದೊಡ್ಡ ವ್ಯಾಪಾರ ಪಾಲುದಾರ. ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಸರಕುಗಳ
- ದ್ವಿಪಕ್ಷೀಯ ವ್ಯಾಪಾರದ ಮೊತ್ತವು 2023-24ರಲ್ಲಿ 135 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟು (ಸರಿ ಸುಮಾರು ₹12.28 ಲಕ್ಷ ಕೋಟಿ) ಆಗಿದೆ. ಮುಕ್ತ ವ್ಯಾಪಾರ ಒಪ್ಪಂದವು ವ್ಯಾಪಾರ ಸಂಬಂಧವನ್ನು ಗಣನೀಯವಾಗಿ ಗಟ್ಟಿಗೊಳಿಸುವ ನಿರೀಕ್ಷೆ ಇದೆ.

## ❖ 'ಕೋಕಾ ಕೋಲಾ ಹೂಡಿಕೆ ಸೆಳೆಯಲು ಯತ್ನ'

**ಸಂದರ್ಭ: ದಾವೋಸ್‌ನ ವಿಶ್ವ ಆರ್ಥಿಕ ಸಮಾವೇಶದಲ್ಲಿ ಕರ್ನಾಟಕದ ನಿಯೋಗ ಚರ್ಚೆ: 'ಕೋಕಾ ಕೋಲಾ ಕಂಪನಿಯು ಭಾರತದಲ್ಲಿ ಹೂಡಿಕೆ ಮಾಡಲಿರುವ 225,760 ಕೋಟಿಯಲ್ಲಿ ಹೆಚ್ಚಿನ ಮೊತ್ತವನ್ನು ಕರ್ನಾಟಕಕ್ಕೆ ತರಲು ಪ್ರಯತ್ನ ನಡೆಸಲಾಗಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.**

- ಸ್ವಿಟ್ಸರ್ಲೆಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಸಮಾವೇಶದಲ್ಲಿ ಅಧಿಕಾರಿಗಳ ನಿಯೋಗದ ಪಾಲ್ಗೊಂಡಿದ್ದಾರೆ. ಜತೆ ಅವರು 'ಈ ವೇಳೆ, ಕೋಕಾ ಕೋಲಾ ಕಂಪನಿಯ ಜಾಗತಿಕ ನೀತಿ ಹಾಗೂ ಸುಸ್ಥಿರತೆಯ ಹಿರಿಯ ಉಪಾಧ್ಯಕ್ಷ ಮೈಕಲ್ ಗೋಲ್ಟ್‌ಮನ್ ಅವರ ಜತೆ ಈ ಬಗ್ಗೆ ಚರ್ಚೆ ನಡೆಸಲಾಗಿದೆ.
- ಪಾನೀಯ ತಯಾರಿಕೆ ಮತ್ತು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ವಿಜಯಪುರ ಜಿಲ್ಲೆಯು ಸೂಕ್ತ ಸ್ಥಳವಾಗಿರುವು ದನ್ನು ಅವರಿಗೆ ಮಾಡಿಕೊಡಲಾಗಿದೆ' ಮನವರಿಕೆ ಎಂದು ಪಾಟೀಲ ಹೇಳಿದ್ದಾರೆ.

Dr. Rajkumar IAS Academy

- ಜಾನ್ 'ಮೆಂಜಿಸ್ ಏವಿಯೇಷನ್ನಿನ ಕಾರ್ಯನಿರ್ವಾಹಕ ಅಧ್ಯಕ್ಷ ಹ್ಯಾಸನ್ ಎಲ್. ಹೌರಿ, ಯುಪಿಎಲ್‌ನ ಅಧ್ಯಕ್ಷ ಜೈ ಶ್ರಾಫ್, ಎಬಿ ಇನ್‌ಬೆವ್‌ನ ಕಾರ್ಪೊರೇಟ್ ವ್ಯವಹಾರಗಳ ಅಧಿಕಾರಿ ಬ್ಲಡ್, ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ನ್ಯಾಚುರಲ್ ಫೈಬರ್ ವೆಲ್ನಿಂಗ್‌ನ ಸುಹಾಸ್ ಉಪ್ಪಲಪತಿ ಅವರ ಜೊತೆ ಫಲಪ್ರದ ಮಾತುಕತೆ ನಡೆಯಿತು' ಎಂದು ಅವರು ಹೇಳಿದ್ದಾರೆ.
- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ಮೆಂಜಿಸ್ ನಿಲ್ದಾಣದಲ್ಲಿ ಗ್ರೌಂಡ್ ಹ್ಯಾಂಡ್ಲಿಂಗ್ ಉದ್ದೇಶದ ಟೆಂಡರ್ ದೊರೆತರೆ ₹85 ಕೋಟಿ ಹೂಡಿಕೆ ಮಾಡಲಿರುವುದನ್ನು ಏವಿಯೇಷನ್, ರಾಜ್ಯದ ನಿಯೋಗದ ಗಮನಕ್ಕೆ ತಂದಿದೆ. ರಫ್ತು ಮಾರುಕಟ್ಟೆ-ಗಳಿಗೆ ಪೂರಕವಾಗಿ, ಮೌಲ್ಯವರ್ಧಿತ ಮೆಕ್ಕೆಜೋಳ ಆಧಾರಿತ ಉತ್ಪನ್ನಗಳನ್ನು ತಯಾರಿಸಲು ಕೃಷಿ ಪರಿಹಾರ ಮತ್ತು ನೀರಾವರಿ ತಂತ್ರಜ್ಞಾನ ಕಂಪನಿಯಾದ ಯುಪಿಎಲ್ ಲಿಮಿಟೆಡ್ ಆಸಕ್ತಿ ವ್ಯಕ್ತಪಡಿ-ಸಿದೆ ಎಂದು ಅವರು ವಿವರಿಸಿದ್ದಾರೆ.

## ❖ ಬ್ಯಾಡ್ಮಿಂಟನ್ ಅಂಕಣದ ಛಲಗಾತಿ



# ಬ್ಯಾಡ್ಮಿಂಟನ್ ಅಂಕಣದ ಛಲಗಾತಿ

## ಸೈನಾ ನೆಹ್ವಾಲ್ ಸಾಧನೆಯ ಹಾದಿ

ಜನ್ಮ ದಿನಾಂಕ 17 ಮಾರ್ಚ್ 1990

## ಗೆದ್ದ ಪ್ರಶಸ್ತಿಗಳು

- 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ
- 2015ರ ಜಕಾರ್ತ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ
- 2017ರ ಗ್ಲಾಸ್ಗೋ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು
- 2014 ಮತ್ತು 2016ರ ಉಬರ್ ಕಪ್ ಟೂರ್ನಿಯಲ್ಲಿ ಕಂಚು
- ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ 3 ಚಿನ್ನ, 2 ಬೆಳ್ಳಿ ಮತ್ತು 1 ಕಂಚು
- 2014, 2018ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕಗಳು
- ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಕಂಚಿನ ಪದಕ
- ಬಿಡಬ್ಲ್ಯುಎಫ್ ವಿಶ್ವ ಟೂರ್‌ನಲ್ಲಿ 1 ಪ್ರಶಸ್ತಿ, ಮೂರು ರನ್ನರ್ ಅಪ್
- ಬಿಡಬ್ಲ್ಯುಎಫ್ ಸೂಪರ್ ಸೀರಿಸ್‌ನಲ್ಲಿ 10 ಕಿರೀಟ, ಐದು ರನ್ನರ್ ಅಪ್
- ಬಿಡಬ್ಲ್ಯುಎಫ್ ಗ್ರ್ಯಾನ್‌ಪ್ರಿನಲ್ಲಿ 10 ಪ್ರಶಸ್ತಿ, ಒಂದು ರನ್ನರ್ ಅಪ್

## ❖ ರಾಜ್ಯಪಾಲ- ಸರ್ಕಾರ ಸಂಘರ್ಷ

- ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಭಾಷಣದಲ್ಲಿ ಕೇಂದ್ರ ಸರ್ಕಾರವನ್ನು ಟೀಕಿಸುವ ಅಂಶಗಳಿವೆ ಎಂಬ ಆಕ್ಷೇಪ ಎತ್ತಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್. (ಜ.22) ಆರಂಭವಾಗಲಿ ರುವ ಜಂಟಿ ಅಧಿವೇಶನದಲ್ಲಿ ಭಾಷಣ ಓದಲು ನಿರಾಕರಿಸಿದ್ದಾರೆ. ಇದು ಸರ್ಕಾರ ಮತ್ತು ಲೋಕಭವನದ ಗಡುವೆ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿದೆ.







## ❖ ರೂಪಾಯಿ ಮೌಲ್ಯ 68 ಪೈಸೆ ಕುಸಿತ

**ಸಂದರ್ಭ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 68 ಪೈಸೆಯಷ್ಟು ಕುಸಿದಿದೆ.**

- ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು 291.65 ಆಗಿದೆ. ಇದು ರೂಪಾಯಿಯ ಈವರೆಗಿನ ಕನಿಷ್ಠ ಮಟ್ಟ.
- ಎದುರು ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು ಡಾಲರ್ 291.050 2. ದಿನದ ನಡುವೆ ಅದು ₹91.74ರವರೆಗೂ ಇಳಿದಿತ್ತು. ವಹಿವಾಟಿನ ಕೊನೆಯಲ್ಲಿ ಮೌಲ್ಯವು 9165 ಆಗಿದೆ.
- ವಿದೇಶಿ ಬಂಡವಾಳದ ಉಂಟಾಗಿರುವ ರಾಜಕೀಯ ಅನಿಶ್ಚಿತತೆ, ದೇಶದ ಷೇರುಪೇಟೆ ಸೂಚ್ಯಂಕಗಳು ನಿರಂತರ ಹೊರಹರಿವು, ಜಾಗತಿಕ ಮಟ್ಟದಲ್ಲಿ ಇಳಿಕೆ ಕಂಡಿರುವುದು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

## ❖ ಗ್ರಾಸಾಮಾಶೆಲ್‌ಗೆ ಇಂದಿರಾ ಪ್ರಶಸ್ತಿ

**ಸಂದರ್ಭ: 2025ನೇ ಸಾಲಿನ 'ಇಂದಿರಾ ಗಾಂಧಿ ಶಾಂತಿ' ಪ್ರಶಸ್ತಿಯು ಮೊಜಾಂಬಿಕದ ಹೋರಾಟಗಾರ್ತಿ ಗ್ರಾಸಾ ಮಾಶೆಲ್ ಅವರಿಗೆ ಸಂದಿದೆ.**


ಗ್ರಾಸಾ ಮಾಶೆಲ್‌ಗೆ ಇಂದಿರಾ ಪ್ರಶಸ್ತಿ

- ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕಾಂಶ ವಲಯ ಹಾಗೂ ಕಷ್ಟಕರ ಸಂದರ್ಭಗಳಲ್ಲಿ ಮಾನವೀಯ ನೆರವು ಮತ್ತು ಆರ್ಥಿಕ ಸಬಲೀಕರಣ ಕ್ಷೇತ್ರಗಳಲ್ಲಿ ಮಾಡಿದ ಕಾರ್ಯಗಳನ್ನು ಪರಿಗಣಿಸಿ ರಾಷ್ಟ್ರೀಯ ಭದ್ರತೆಯ ಮಾಜಿ ಸಲಹೆಗಾರ ಶಿವಶಂಕರ್ ಮೆನನ್ ಅವರ ಅಧ್ಯಕ್ಷತೆಯ ಸಮಿತಿಯು ಗ್ರಾಸಾ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ ಎಂದು ಇಂದಿರಾ ಗಾಂಧಿ ಸ್ಮಾರಕ ಟ್ರಸ್ಟ್ ಬುಧವಾರ ತಿಳಿಸಿದೆ.
- ಪ್ರಶಸ್ತಿಯು ₹1 ಕೋಟಿ ಮೊತ್ತ. ಫಲಕ ಹಾಗೂ ಪ್ರಶಂಸನಾ ಪತ್ರ ಒಳಗೊಂಡಿದೆ. ಮೊಜಾಂಬಿಕದ ಮೊದಲ ಅಧ್ಯಕ್ಷ ಸಮೋರಾ ಮೊಯಿಸೆಸ್ ಮಾಶೆಲ್ ಅವರನ್ನು ಗ್ರಾಸಾ ಮದುವೆ ಯಾಗಿದ್ದರು. ಸಮೋರಾ 1986ರಲ್ಲಿ ನಿಧನರಾದ ಬಳಿಕ ದಕ್ಷಿಣ ಆಫ್ರಿಕಾದ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರನ್ನು ವಿವಾಹವಾದರು. ಮೊಜಾಂಬಿಕ ಶಿಕ್ಷಣ ಮತ್ತು ಸಂಸ್ಕೃತಿ ಖಾತೆಯ ಮೊದಲ ಸಚಿವರಾಗಿಯೂ ಅವರು ಕಾರ್ಯನಿರ್ವಹಿಸಿದರು.

# ‘ಸಂವಿಧಾನದಿಂದ ಕ್ರಾಂತಿಕಾರಿ ಪ್ರಗತಿ’

**ಸಂವಿಧಾನವೇ ಬೆಳಕು**

Curated by

DH DECCAN HERALD | ಪ್ರಜಾವಾಣಿ



ಸಂವಾದದಲ್ಲಿ ಶರಣಪ್ಪ ಎಸ್.ಡಿ., ಶ್ರೀನಿವಾಸ ನವಲೆ, ‘ಪ್ರಜಾವಾಣಿ’ ಉಪಸಂಪಾದಕ ಪ್ರಭು ಬ.ಅಡವಿಹಾಳ, ನರೇಂದ್ರ ಬಡಶೇಷಿ, ಅಪ್ಪಗೆರೆ ಸೋಮಶೇಖರ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

• ಬಷೀರಅಹ್ಮದ್ ನಗಾರಿ

ಕಲಬುರಗಿ: ‘ಭಾರತದ ಸಂವಿಧಾನ ಬರೀ ಕಾನೂನು ಗ್ರಂಥವಲ್ಲ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಕಾರ್ಯವ್ಯಾಪ್ತಿಗಳನ್ನಷ್ಟೇ ಹೇಳಲ್ಲ. ನಿತ್ಯದ ಕ್ರಮಕ್ಕಾಗಿ ಶ್ರೀಸಾಮಾನ್ಯರಿಗಾಗಿ ಮಾಡಿದ ಸರ್ವೋಚ್ಚ ಕಾನೂನು. ಸಂವಿಧಾನ ದೇಶದ ಆಡಳಿತದ ಬೆನ್ನೆಲುಬು. ಶರೀರಕ್ಕೆ ತಟ್ಟಿದ ರೋಗ ವೈದ್ಯ ಗುಣಪಡಿಸುವಂತೆ ಸಮಾಜಕ್ಕೆ ಅಂಟಿದ ರೋಗಗಳಿಗೆ ಪರಿಹಾರ ಹುಡುಕುವುದು ಸಂವಿಧಾನದ ಆಶಯ...’

‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಪತ್ರಿಕಾ ಸಮೂಹವು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿದ್ದ ‘ಸಂವಿಧಾನವೇ ಬೆಳಕು’ ಸಂವಾದದಲ್ಲಿ ‘ಸಂವಿಧಾನ’ದ ಕುರಿತು ಗಣ್ಯರು ಬಿಚ್ಚಿಟ್ಟ ಹೊಳಹುಗಳಿವು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ, ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ, ನಿವೃತ್ತ ಪ್ರಾಚಾರ್ಯ ನರೇಂದ್ರ ಬಡಶೇಷಿ ಹಾಗೂ ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಅಪ್ಪಗೆರೆ ಸೋಮಶೇಖರ ಅವರು ಸಂವಿಧಾನದಡಿ ದೇಶದ ಜನರಿಗೆ ಸಂದಿರುವ ‘ಮೀಸಲಾತಿ’, ‘ಸಾಮಾಜಿಕ ನ್ಯಾಯ’ ಹಾಗೂ ‘ಶೋಷಿತರ ಹಕ್ಕು’ಗಳ ಬಗೆಗೆ ಅರ್ಥಪೂರ್ಣ ಅಭಿಪ್ರಾಯಗಳನ್ನು ಮಂಡಿಸಿದರು.

**ಸಾಮಾಜಿಕ ನ್ಯಾಯ:** ‘1950ರ ಜನವರಿ 26ರಂದು ಸಂವಿಧಾನ ಜಾರಿಗೆ ಬಂತು. ಅಂದಿನಿಂದ ಇಂದಿನವರೆಗೆ ಭಾರತವು ಅಗಣಿತ ಪ್ರಗತಿ ಕಂಡಿದೆ. ಕ್ರಾಂತಿಕಾರಿ ಬದಲಾವಣೆಗಳು, ಸುಧಾರಣೆಗಳಿಗೆ ಸಾಕ್ಷಿಯಾಗಿದೆ. ಇದೆಲ್ಲಕ್ಕೂ ಸಂವಿಧಾನವೇ ಮೂಲ ಕಾರಣ’ ಎಂದು ಶ್ರೀನಿವಾಸ ನವಲೆ ಪ್ರತಿಪಾದಿಸಿದರು.

‘ಭೂಸುಧಾರಣೆ ಕಾಯ್ದೆ, ಕಾರ್ಮಿಕರಿಗೆ ಬೋನಸ್, ಮಹಿಳೆಯರಿಗೆ ಮಾತೃತ್ವ ರಜೆಯಂಥ ಕಾನೂನುಗಳು ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಫಲಗಳು. ಇನ್ನೂ ಹಲವು ಕ್ಷೇತ್ರಗಳಲ್ಲಿ ಈ ಪರಿಕಲ್ಪನೆ ಅನುಷ್ಠಾನ ಆಗಬೇಕಿದೆ’ ಎಂದರು.

ಪ್ರಜಾವಾಣಿ ನೋಡಿಯೊ

ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

## ‘ಸಮಾನ ಅವಕಾಶ ಸೃಷ್ಟಿಗೆ ಮೀಸಲಾತಿ ಅಗತ್ಯ’

‘ದೇಶದಲ್ಲಿ ಮೀಸಲಾತಿ ಪ್ರಖರವಾಗಿ ಪ್ರತಿಪಾದಿಸಿದ್ದು ಶಾಹು ಮಹಾರಾಜ. ಸಾಮಾಜಿಕ ಹಿಂದುಳಿವಿಕೆ, ಆರ್ಥಿಕ ಹಿಂದುಳಿವಿಕೆ ಆಧಾರದಲ್ಲಿ ಮೀಸಲಾತಿ (ಇಡಬ್ಲ್ಯುಎಸ್) ಕಲ್ಪಿಸಲಾಗಿದೆ. ಸಮಾನ ಅವಕಾಶಗಳ ಸೃಷ್ಟಿಗೆ ಅದು ಅಗತ್ಯ’ ಎಂದು ಶ್ರೀನಿವಾಸ ನವಲೆ ಪ್ರತಿಪಾದಿಸಿದರು.

‘ಯುವ ತಲೆಮಾರು ಮೀಸಲಾತಿ ಜಾರಿಯಾದ ಹಿನ್ನೆಲೆಯನ್ನು ಗ್ರಹಿಸುತ್ತಿಲ್ಲ. ಹೀಗಾಗಿ ಮೀಸಲಾತಿ ವ್ಯವಸ್ಥೆ ಟೀಕಿಸುತ್ತಿದೆ. ಅವರಿಗೆ ಸಮಾಜದಲ್ಲಿದ್ದ ಜಾತಿ ವ್ಯವಸ್ಥೆಯ ಕ್ರೂರತೆಯನ್ನು ಮನಮುಟ್ಟುವಂತೆ ಹೇಳಬೇಕಿದೆ’ ಎಂದರು. ‘ಸಮಾನತೆ ಸಾಧಿಸಲು ಮೀಸಲಾತಿಯೇ ಮೆಟ್ಟಲು. ದೇಶದಲ್ಲಿ ಪುರುಷ ಪ್ರಧಾನ ಸಮಾಜವಿದೆ. ಜನಸಂಖ್ಯೆಯ ಶೇ49ರಷ್ಟಿರುವ ಸ್ತ್ರೀಯರಿಗೆ ಮೀಸಲಾತಿ ಅತ್ಯಗತ್ಯ’ ಎನ್ನುತ್ತಾರೆ ಶರಣಪ್ಪ ಎಸ್.ಡಿ.

‘ಮೀಸಲಾತಿ ದಲಿತರಿಗಷ್ಟೇ ಎಂಬ ಮೌಢ್ಯ ಇಂದಿಗೂ ದೇಶದಲ್ಲಿದೆ. ಹಿಂದೆಲ್ಲ ಭಾರತ ಅನಕ್ಷರತೆಯಿಂದ ಬಳಲಿತ್ತು. ಈಗ ಸಂವಿಧಾನದ ಜ್ಞಾನವಿಲ್ಲದೇ ಬಳಲುತ್ತಿದೆ. ಎಲ್ಲರಿಗೂ ಸಂವಿಧಾನವನ್ನು ಕಲಿಸಬೇಕಿದೆ’ ಎಂದು ಅಪ್ಪಗೆರೆ ಸೋಮಶೇಖರ ಪ್ರತಿಪಾದಿಸಿದರು.

ಶರಣಪ್ಪ ಎಸ್.ಡಿ. ಮಾತನಾಡಿ, ‘ಸಂವಿಧಾನದ ಪೀಠಿಕೆಯೇ ಹೇಳುವಂತೆ ಕಾನೂನಿನಡಿ ಎಲ್ಲರೂ ಸಮಾನರು. ಸಮಾನತೆಯ ಕಾಯ್ದೆಗಳು ಸಂವಿಧಾನದಡಿ ಜನರಿಗೆ ಸಿಕ್ಕ ಅಸ್ತ್ರಗಳು’ ಎಂದು ಬಣ್ಣಿಸಿದರು.

‘ಸಾಮಾಜಿಕ ನ್ಯಾಯವು ಬಡತನ ನಿರ್ಮೂಲನೆ ಕಾನೂನಲ್ಲ. ಅದು ಪ್ರಾತಿನಿಧ್ಯ ಹೇಳುವಂಥದ್ದು. ಸಂವಿಧಾನ ಜಾರಿಗೂ ಮುನ್ನ ಬಹುಸಂಖ್ಯಾತರಿಗೆ ಆಸ್ತಿ ಹಕ್ಕು, ಅಕ್ಷರ ಕಲಿಕೆ, ಅಧಿಕಾರದ ಅವಕಾಶಗಳೇ ಇರಲಿಲ್ಲ. ಶಿಕ್ಷಣ ಒಂದು ಸಮುದಾಯಕ್ಕೆ ಸೀಮಿತವಾಗಿತ್ತು. ಈ ಅರಿವಿದ್ದ ಡಾ.ಅಂಬೇಡ್ಕರ್ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯ ಅಡಕಗೊಳಿಸಿದರು’ ಎಂದು ಅಪ್ಪಗೆರೆ ಸೋಮಶೇಖರ ಪ್ರತಿಪಾದಿಸಿದರು.

**ಶೋಷಿತರ ಹಕ್ಕು:** ‘ಶೋಷಣೆ ಬಹುರೂಪಿ. ಅದರಲ್ಲಿ ಮಾನಸಿಕ, ದೈಹಿಕ, ಸಾಮಾಜಿಕ, ಸಾಂಸ್ಥಿಕ ಎಂದೆಲ್ಲ ಹಲವು ಬಗೆ. ಮಹಿಳೆಯರು, ಮಕ್ಕಳು, ಅನಕ್ಷರಸ್ಥರೇ ಹೆಚ್ಚಾಗಿ ಶೋಷಣೆಗೆ ತುತ್ತಾಗುತ್ತಾರೆ. ಹಿಂದೆಲ್ಲ ಶೋಷಿತರು ತಮ್ಮ ಹಕ್ಕಿಗಾಗಿ ತಾವೇ ಮುಂದೆ ಬರಬೇಕಿತ್ತು. ಆದರೆ, ಇಂದು ಸರ್ಕಾರಿ ಸಂಸ್ಥೆಗಳೇ ಶೋಷಿತರ ಬಳಿಗೆ ಹೋಗುತ್ತಿವೆ. ಅವರು ನೋವು ಹೇಳಿಕೊಂಡರೆ ಅವರಿಗೆ ರಕ್ಷಣೆ, ಹಕ್ಕು ಕೊಡಿಸಲು ಸಾಧ್ಯವಾಗುತ್ತದೆ’ ಎಂದರು ಶ್ರೀನಿವಾಸ ನವಲೆ.

ನರೇಂದ್ರ ಬಡಶೇಷಿ ಅವರು, ‘ಶೋಷಿತರ ಹಕ್ಕುಗಳು ಸಂವಿಧಾನ ಶೋಷಿತರಿಗೆ ನೀಡಿದ ಧ್ವನಿ. ಪ್ರಶ್ನಿಸಲು ದೊರೆತ ಹಕ್ಕು. ನಮ್ಮ ವಿಚಾರ, ಧ್ವನಿಗೆ ಮಾನ್ಯತೆ ಸಿಗುತ್ತಿದೆ. ಅದು ಸಂವಿಧಾನದ ಶ್ರೇಷ್ಠ ಕೊಡುಗೆ’ ಎಂದು ಬಣ್ಣಿಸಿದರು.

‘ಸಾಮಾಜಿಕ ಶೋಷಣೆ, ಜಾತಿ ವ್ಯವಸ್ಥೆ ವಿಕಾರ ಸ್ವರೂಪ ಪಡೆದಿವೆ. ಶೋಷಿತರ ಹಕ್ಕುಗಳು ಸಂಪೂರ್ಣ ಕಾರ್ಯಗತಗೊಂಡಿಲ್ಲ. ಎಸ್‌ಸಿಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಸ್ಥಿತಿ ಏನಿದೆ? ನೊಂದವರಿಗೆಲ್ಲ ನ್ಯಾಯ ಸಿಕ್ಕಿದೆಯೇ? ಸಂವಿಧಾನ ಅನುಷ್ಠಾನದಲ್ಲಿ ಎಲ್ಲಿ ಎಡವುತ್ತಿದ್ದೇವೆ ಎಂಬುದರ ಆತ್ಮಾವಲೋಕನ ಅಗತ್ಯ’ ಎಂದು ಅಪ್ಪಗೆರೆ ಸೋಮಶೇಖರ ಅಭಿಪ್ರಾಯಪಟ್ಟರು.

‘ಶೋಷಿತರಿಗೆ ಸಂವಿಧಾನ ಹಲವು ಬಗೆಯಲ್ಲಿ ದಾರಿದೀಪ. ಒಂದೆಡೆ ಶೋಷಿತರಿಗೆ ಸಂವಿಧಾನವು ಅವರ ಹಕ್ಕುಗಳನ್ನು ಅರ್ಥೈಸುತ್ತದೆ; ಮತ್ತೊಂದೆಡೆ ಜೈಲಿನ ಕೈದಿಗಳಿಗೂ ಅದು ಕೆಲ ಹಕ್ಕುಗಳ ರಕ್ಷಣೆ ನೀಡುತ್ತದೆ’ ಎಂದರು ಕಮಿಷನರ್ ಶರಣಪ್ಪ ಎಸ್.ಡಿ.

# ‘ಬಾಹ್ಯಾಕಾಶ ಯಾನದಿಂದ ಜೀವನ ದೃಷ್ಟಿಕೋನ ಬದಲು’



ನಮ್ಮ ಭೂಮಿ ಕೇವಲ ಕಲ್ಲುಬಂಡೆಗಳಿಂದ ಕೂಡಿದೆ ಎಂಬುದು ಕೆಲವರ ಭಾವನೆ. ಆದರೆ, ಅದು ಚಲನಶೀಲ. ಇಲ್ಲಿನ ಋತುಗಳಲ್ಲಿ, ಸಾಗರದಲ್ಲಿ ಕಂಡುಬರುವ ಬದಲಾವಣೆಗಳನ್ನು ನಾನು ಅಂತರಿಕ್ಷದಿಂದ ನೋಡಿರುವೆ. ಉತ್ತರ ಅಥವಾ ದಕ್ಷಿಣ ಧ್ರುವದಲ್ಲಿ ಹಿಮಗಡ್ಡೆಗಳು ರೂಪುಗೊಳ್ಳುವುದನ್ನೂ ನೋಡಿರುವೆ
**ಸುನಿತಾ ವಿಲಿಯಮ್ಸ್**

ನವದೆಹಲಿ (ಪಿಟಿಐ): ‘ನನ್ನ ಬಾಹ್ಯಾಕಾಶ ಯಾನಗಳು ಬದುಕಿನ ಕುರಿತ ದೃಷ್ಟಿಕೋನವನ್ನೇ ಬದಲಾಯಿಸಿವೆ’ ಎಂದು ಗಗನಯಾತ್ರಿ ಸುನಿತಾ ವಿಲಿಯಮ್ಸ್ ಹೇಳಿದ್ದಾರೆ.

‘ಭೂಮಿಯನ್ನು ಒಂದು ಗ್ರಹವಾಗಿ ನಾವು ಬಾಹ್ಯಾಕಾಶದಿಂದ ನೋಡಿದಾಗ, ವಿವಿಧ ವಿಚಾರಗಳ ಕುರಿತು ಮನುಷ್ಯರು ವಾದ ಮಾಡುವುದು ಅಥವಾ ಭಿನ್ನಾಭಿಪ್ರಾಯಗಳನ್ನು ಹೊಂದಿರುವುದು ಕ್ಷುಲ್ಲಕ ಎನಿಸುತ್ತದೆ’ ಎಂದು ಹೇಳಿದ್ದಾರೆ.

ಪ್ರಸ್ತುತ ಭಾರತ ಪ್ರವಾಸದಲ್ಲಿರುವ ಅವರು, ಇಲ್ಲಿನ ಅಮೆರಿಕನ್ ಸೆಂಟರ್ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದರು. ‘ಪತಿ ಮತ್ತು ನನ್ನ ನಡುವೆ ವಾಗ್ವಾದ ನಡೆಯುತ್ತಿರುತ್ತವೆ. ಆದರೆ, ಬಾಹ್ಯಾಕಾಶಕ್ಕೆ ಹೋಗಿ ಭೂಮಿಯತ್ತ ಒಮ್ಮೆ ದೃಷ್ಟಿಹಾಯಿಸಿ ಯೋಚಿಸಿದಾಗ ಈ ವಾಗ್ವಾದ ನಡೆಸುವುದೆಲ್ಲಾ ಕ್ಷುಲ್ಲಕ ಎನಿಸುತ್ತದೆ’ ಎಂದು ಸುನಿತಾ ವಿಲಿಯಮ್ಸ್ ಹೇಳಿದ್ದಾರೆ.

‘ಬಾಹ್ಯಾಕಾಶ ತಲುಪಿದ ಕೆಲ ಹೊತ್ತಿನ ನಂತರ ನಮ್ಮ ದೃಷ್ಟಿಕೋನ ವಿಶಾಲವಾಗುತ್ತಾ ಹೋಗುತ್ತದೆ. ಒಂದು ನಿರ್ದಿಷ್ಟ ಮನೆ ಬದಲಾಗಿ ಇಡೀ ಭೂಮಿಯೇ ನಮ್ಮ ಮನೆ ಎಂಬ ಅರಿವು ಮೂಡತೊಡಗುತ್ತದೆ’ ಎನ್ನುವ ಮೂಲಕ ತಮ್ಮ ಬಾಹ್ಯಾಕಾಶ ಪಯಣದ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಇತ್ತೀಚೆಗೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಕೈಗೊಂಡಿದ್ದ ಯಾತ್ರೆ ಕುರಿತು ಕೂಡ ಅವರು ಮಾತನಾಡಿದ್ದಾರೆ.

ಎಂಟು ದಿನಗಳ ಮಟ್ಟಿಗೆ ಐಎಸ್‌ಎಸ್‌ಗೆ ತೆರಳಿದ್ದ ಸುನಿತಾ ಅವರನ್ನು ಒಳಗೊಂಡ ತಂಡವು, ಗಗನನೌಕೆಯಲ್ಲಿನ ತಾಂತ್ರಿಕ ದೋಷದಿಂದಾಗಿ ಒಂಬತ್ತು ತಿಂಗಳು ಅಲ್ಲಿಯೇ ಇರಬೇಕಾಯಿತು.

## ಸಾಧನೆಗಳು

ಸುನಿತಾ ವಿಲಿಯಮ್ಸ್ ತಮ್ಮ ವೃತ್ತಿಜೀವನದಲ್ಲಿ 9 ಬಾರಿ ಬಾಹ್ಯಾಕಾಶ ನಡಿಗೆ ಕೈಗೊಂಡಿದ್ದಾರೆ. ಒಟ್ಟು 62 ಗಂಟೆ 6 ನಿಮಿಷಗಳ ಅಂತರಿಕ್ಷ ಪಯಣ ನಡೆಸಿ, ಇಂತಹ ಸಾಧನೆ ಮಾಡಿದ ಮಹಿಳೆ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಭೌತವಿಜ್ಞಾನದಲ್ಲಿ ಪದವಿ, ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ ಬಳಿಕ ಅವರು ಅಮೆರಿಕ ನೌಕಾಪಡೆಗೆ ಸೇರಿದರು. 40 ಬಗೆಯ ಯುದ್ಧವಿಮಾನಗಳನ್ನು 4 ಸಾವಿರಕ್ಕೂ ಅಧಿಕ ಗಂಟೆಗಳಷ್ಟು ಹಾರಾಟ ನಡೆಸಿದ ಅನುಭವವನ್ನೂ ಹೊಂದಿದ್ದಾರೆ.

## ನಾಸಾದಿಂದ ನಿವೃತ್ತಿ

ನಾಸಾದಿಂದ ಗಗನಯಾನಿ ಸುನಿತಾ ವಿಲಿಯಮ್ಸ್ ನಿವೃತ್ತಿಯಾಗಿದ್ದಾರೆ.

27 ವರ್ಷಗಳ ತಮ್ಮ ವೃತ್ತಿ ಬದುಕಿನಲ್ಲಿ, ಅವರು ಮೂರು ಬಾರಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ(ಐಎಸ್‌ಎಸ್) ಪಯಣಿಸಿದ್ದಾರೆ. ಜೊತೆಗೆ ಹಲವು ಬಾಹ್ಯಾಕಾಶ ಯಾನಗಳನ್ನು ಕೂಡ ಯಶಸ್ವಿಯಾಗಿ ಪೂರೈಸಿ ಗಮನ ಸೆಳೆದಿದ್ದಾರೆ.

ಅವರ ತಂದೆ ದೀಪಕ್ ಪಾಂಡ್ಯ ಗುಜರಾತ್‌ನ ಮೆಹ್ಸಾನಾ ಜಿಲ್ಲೆಯ ಝುಲಾಸನ್‌ದವರು. ತಾಯಿ ಸ್ಲೋವೆನಿಯಾದವರಾದ ಉರ್ಸುಲಿನ್ ಬಾನಿ.

‘ಸುನಿತಾ ವಿಲಿಯಮ್ಸ್ ಮಾನವಸಹಿತ ಗಗನಯಾನದ ಪ್ರವರ್ತಕರೊಬ್ಬರಲ್ಲಾಗಿದ್ದಾರೆ. ಐಎಸ್‌ಎಸ್‌ಗೆ ಕೈಗೊಂಡ ಯಾನ ಹಾಗೂ ನಾಯಕತ್ವದ ಮೂಲಕ ಬಾಹ್ಯಾಕಾಶ ಅನ್ವೇಷಣೆ ಕ್ಷೇತ್ರದ ಭವಿಷ್ಯ ರೂಪಿಸಿದ್ದಾರೆ’ ಎಂದು ನಾಸಾ ಆಡಳಿತಾಧಿಕಾರಿ ಜೇರ್ಡ್ ಐಸಾಕ್‌ಮನ್ ಪ್ರಕಟಣೆಯಲ್ಲಿ ಶ್ಲಾಘಿಸಿದ್ದಾರೆ.

# ತಾಳ್ಯಾಕ ತಂತ್ಯಾಕ ಜಗದ ಹಂಗ್ಯಾಕ

**ಟ್ರಂಪ್ ಆಡಳಿತಕ್ಕೆ ಒಂದು ವರ್ಷ**



• ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

ಜನವರಿ 20ಕ್ಕೆ (ಮಂಗಳವಾರ) ಡೊನಾಲ್ಡ್ ಟ್ರಂಪ್ ಅವರು ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಒಂದು ವರ್ಷ ತುಂಬಿದೆ. ಚುನಾವಣೆಯಲ್ಲಿ ಗೆದ್ದ ನಂತರ, ಅಧಿಕೃತವಾಗಿ ಅಧಿಕಾರ ಸ್ವೀಕರಿಸುವುದಕ್ಕೂ ಮುಂಚೆಯೇ ಅವರು ಈ ಬಾರಿಯ ತಮ್ಮ ಆಡಳಿತ ಭಿನ್ನವಾಗಿರುವ ಸೂಚನೆಗಳನ್ನು ನೀಡಿದ್ದರು. ಶ್ವೇತಭವನದ ಮೆಟ್ಟಿಲು ಹತ್ತಿದ ದಿನದಿಂದ ಅವರು ತಮ್ಮ ಅನಿರೀಕ್ಷಿತ ನಿರ್ಧಾರಗಳು, ಅಚ್ಚರಿಯ ಘೋಷಣೆಗಳು, ಊಹೆ ಮಾಡಲಾಗದ ನಿಲುವುಗಳನ್ನು ಪ್ರಕಟಿಸುತ್ತಲೇ ಇದ್ದಾರೆ.

ಅಮೆರಿಕದ ಅಧ್ಯಕ್ಷರಾಗಿದ್ದರೂ ಟ್ರಂಪ್ ಅವರ ಚಟುವಟಿಕೆ ಮತ್ತು ಕ್ರಮಗಳು ಅಮೆರಿಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ಜಗತ್ತೇ ತಮ್ಮ ಪ್ರಯೋಗ ಶಾಲೆ ಎನ್ನುವಂತೆ ಭಾವಿಸಿದ್ದಾರೆ.




ತಮ್ಮ ಮಾತು ಎಲ್ಲರೂ ಕೇಳಬೇಕು ಎನ್ನುವುದು ಅವರ ಬಯಕೆ. ಮಾತು ಕೇಳದಿದ್ದರೆ, ಅಂಥ ದೇಶದ ಮೇಲೆ ಸುಂಕದ ಅಸ್ತ್ರ ಝಳಪಿಸುತ್ತಾರೆ. ದಿಢೀರ್ ಆಗಿ ಸುಂಕದ ಪ್ರಮಾಣವನ್ನು ಹತ್ತಾರು ಪಟ್ಟು ಹೆಚ್ಚಿಸುತ್ತಾರೆ. ನಂತರ ಅದನ್ನು ಇಳಿಸುತ್ತಾರೆ, ತಡೆಯುತ್ತಾರೆ, ಮುಂದೂಡುತ್ತಾರೆ. ಒಮ್ಮೆ ಉಕ್ರೇನ್ ಮೇಲೆ ಕೆಂಡಾಮಂಡಲರಾಗಿ ಕೂಗಾಡುತ್ತಾರೆ. ಮತ್ತೊಮ್ಮೆ ಅನಾಥನನ್ನು ಎಳೆದು ಎದೆಗಪ್ಪಿಕೊಳ್ಳುವಂತೆ ಪ್ರೀತಿ ತೋರುತ್ತಾರೆ. ‘ಮೋದಿ ನನ್ನ ಸ್ನೇಹಿತರು’ ಎನ್ನುತ್ತಾರೆ. ಆದರೆ, ಭಾರತದ ಮೇಲೆ ಸುಂಕದ ಪ್ರಮಾಣವನ್ನು ಏರಿಸುತ್ತಲೇ ಇದ್ದಾರೆ. ರಷ್ಯಾದಿಂದ ಕಡಿಮೆ ಬೆಲೆಗೆ ಸಿಗುವ ಇಂಧನ ಕೊಳ್ಳುವುದನ್ನು ಭಾರತ ಬಿಡಬೇಕು ಎಂದು ಠರಾವು ಹೊರಡಿಸುತ್ತಾರೆ. ಅಮೆರಿಕದಿಂದಲೇ ಶಸ್ತ್ರಾಸ್ತ್ರಗಳನ್ನು ಕೊಳ್ಳಬೇಕು ಎಂದು ಆದೇಶ ಹೊರಡಿಸಿ, ಒತ್ತಡ ತಂತ್ರ ಅನುಸರಿಸುತ್ತಾರೆ.

ಟ್ರಂಪ್ ಅವರು ಕೇವಲ ಮಾತಿಗೆ ಸೀಮಿತವಾಗಿಲ್ಲ. ಕೆಲವು ದೇಶಗಳಲ್ಲಿ ಭಾರಿ ತಲ್ಲಣವನ್ನೇ ಉಂಟುಮಾಡಿದ್ದಾರೆ. ರಾತ್ರೋರಾತ್ರಿ ವೆನೆಜುವೆಲಾದ ಅಧ್ಯಕ್ಷರ ಮನೆಗೆ ನುಗ್ಗಿ ಅವರನ್ನು ಅಮೆರಿಕಕ್ಕೆ ಹೊತ್ತೊಯ್ಯಲಾಗುತ್ತದೆ. ‘ನಾನೇ ವೆನೆಜುವೆಲಾ ಅಧ್ಯಕ್ಷ’ ಎಂದು ಘೋಷಣೆ ಮಾಡುತ್ತಾರೆ. ಎಂಟು ಯುದ್ಧಗಳನ್ನು ನಿಲ್ಲಿಸಿದೆ, ಜಗತ್ತಿನಲ್ಲಿ ಶಾಂತಿ ಸ್ಥಾಪಿಸಿದೆ ಎಂದು ಹೇಳುತ್ತಲೇ ಗ್ರೀನ್‌ಲ್ಯಾಂಡ್ ಸೇರಿದಂತೆ ಹಲವು ದೇಶಗಳ ಮೇಲೆ ಸೇನಾ ದಾಳಿ ನಡೆಸುವ ಸೂಚನೆ ನೀಡುತ್ತಾರೆ. ಟ್ರಂಪ್ ಅವರ ದೃಷ್ಟಿ ತಮ್ಮ ಮೇಲೆ ಬೀಳದಿರಲಿ ಎಂದು ಕೆಲವು ದೇಶಗಳ ನಾಯಕರು ಪ್ರಾರ್ಥಿಸುವಂತಾಗಿದೆ.

ಗಳಿಗೆಯಿಂದ ಗಳಿಗೆಗೆ ಅವರ ಮನಃಸ್ಥಿತಿ ಬದಲಾಗುತ್ತದೆ. ಅದನ್ನು ಅನುಸರಿಸಿ ಅವರ ಮಾತು, ಕ್ರಿಯೆ, ದೇಹಭಾಷೆ ಎಲ್ಲವೂ ಬದಲಾಗುತ್ತವೆ. ಸಾರ್ವಜನಿಕವಾಗಿ ಕೂಗಾಡಿದ, ಗೇಲಿ ಮಾಡಿದ, ಗಹಗಹಿಸಿ ನಕ್ಕ, ಸಿಟ್ಟಿನಿಂದ ಹೂಂಕರಿಸಿದ ಘಟನೆಗಳು ಅದೆಷ್ಟೋ. ವ್ಯಕ್ತಿಗಳ ಬಗ್ಗೆ ಆಗಲಿ, ದೇಶದ ಬಗ್ಗೆ ಆಗಲಿ, ಇಂಥದ್ದು ಮಾತಾಡಬಾರದು ಎನ್ನುವ ಗೆರೆಯನ್ನು ಅವರೆಂದೂ ಹಾಕಿಕೊಂಡಿಲ್ಲ. ಮನಸ್ಸು ಹರಿದಂತೆ, ನಾಲಿಗೆ ಹೊರಳಿದಂತೆ ವಾಕ್‌ಪ್ರಹಾರ ಹರಿಯುತ್ತದೆ. ಅವರ ಮಾತು, ಭಾಷೆ, ಹಾವಭಾವಗಳ ಬಗ್ಗೆ ಕೋಟ್ಯಂತರ ಮೀಮ್‌ಗಳು, ಎಐ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.


ಟ್ರಂಪ್ ಅವರನ್ನು ಹೀಗೇ ಎಂದು ಯಾರೂ ಅಂದಾಜು ಮಾಡಲಾಗದು. ಎಲ್ಲವೂ ತಮ್ಮ ದೇಶದ ಹಿತಾಸಕ್ತಿ ಕಾಪಾಡಲು ಎನ್ನುವುದು ಅವರ ಸಮರ್ಥನೆ. ಅದನ್ನು ಅಲ್ಲಗಳೆಯಲಾಗದು. ಅವರನ್ನು ಕಡೆಗಣಿಸಲೂ ಆಗದು. ‘ವಿಶ್ವದ ದೊಡ್ಡಣ್ಣ’ ಎಂದು ಕರೆಸಿಕೊಳ್ಳುವ ದೇಶದಲ್ಲಿ ಜನರೇ ಎರಡನೇ ಬಾರಿಗೆ ಮತ ಹಾಕಿ, ಆರಿಸಿ ಕಳಿಸಿದ್ದಾರೆ. ಅಮೆರಿಕದ ಆಡಳಿತ ವ್ಯವಸ್ಥೆಯಲ್ಲಿಯೂ ಅವರು ಅನೇಕ ಬದಲಾವಣೆಗಳನ್ನು ಮಾಡಿದ್ದಾರೆ. ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುವುದು ಅವರ ಶೈಲಿ. ಟ್ರಂಪ್ ಜನರ ಪಾಲಿಗೆ ಬಿಸಿತುಪ್ಪವಾಗಿದ್ದು, ಉಗುಳಲೂ ಆಗದ, ನುಂಗಲೂ ಆಗದ ಸ್ಥಿತಿ ಇದೆ.




## ಟ್ರಂಪ್ ನೀತಿ: ಅಮೆರಿಕನ್ನರಲ್ಲಿ ಆತಂಕ

ಡೊನಾಲ್ಡ್ ಟ್ರಂಪ್ ಅವರ ನೀತಿಗಳು ಮತ್ತು ಅವರ ಆದ್ಯತೆಗಳು ಅಮೆರಿಕನ್ನರಲ್ಲಿ ಕಳವಳ ಉಂಟು ಮಾಡಿವೆ ಎಂದು ಸುದ್ದಿ ಸಂಸ್ಥೆ ಎಪಿ ಮತ್ತು ಷಿಕಾಗೊ ವಿಶ್ವವಿದ್ಯಾಲಯದ ಎನ್‌ಒಆರ್‌ಸಿ (ನ್ಯಾಷನಲ್ ಒಪಿನೀಯನ್ ರಿಸರ್ಚ್ ಸೆಂಟರ್) ನಡೆಸಿರುವ ಜಂಟಿ ಸಮೀಕ್ಷೆ ತಿಳಿಸಿದೆ. ಜನವರಿ ತಿಂಗಳ ಆರಂಭದಲ್ಲಿ ನಡೆಸಿರುವ ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಜನರ ಪೈಕಿ ಶೇ 59 ಮಂದಿ ಅಧ್ಯಕ್ಷರಾಗಿ ಟ್ರಂಪ್ ಅವರ ಕೆಲಸ ತೃಪ್ತಿ ತಂದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಟ್ರಂಪ್ ಆಡಳಿತದಲ್ಲಿ ಅರ್ಥವ್ಯವಸ್ಥೆ ಇನ್ನಷ್ಟು ಹದಗೆಟ್ಟಿದೆ ಎಂದು ಜನರು ಅಭಿಪ್ರಾಯಪಟ್ಟಿದ್ದಾರೆ. ಹೊರದೇಶಗಳಿಂದ ಆಮದಾಗುವ ಉತ್ಪನ್ನಗಳ ಮೇಲೆ ಸುಂಕ ಹೆಚ್ಚಳ ಮಾಡಿರುವುದರಿಂದ ದಿನನಿತ್ಯದ ವೆಚ್ಚ ಹೆಚ್ಚಾಗಿದೆ ಎಂದು ಜನರು ಹೇಳಿದ್ದಾರೆ. ಟ್ರಂಪ್ ಆರ್ಥಿಕ ನಿರ್ವಹಣೆ ಸರಿಯಾಗಿಲ್ಲ ಎಂದು ಶೇ 62 ಮಂದಿ ಹೇಳಿದ್ದಾರೆ. ವಲಸೆ ವಿಚಾರದಲ್ಲಿ ಟ್ರಂಪ್ ನೀತಿಯನ್ನೂ ಜನರು ವಿರೋಧಿಸಿದ್ದಾರೆ. ವೆನೆಜುವೆಲಾ ವಿರುದ್ಧದ ಸೇನಾ ಕ್ರಮವನ್ನು ಶೇ 57 ಮಂದಿ ಸರಿಯಲ್ಲ ಎಂದಿದ್ದಾರೆ.

| | ಅಕ್ರಮ ವಲಸಿಗರ ಗಡಿಪಾರು | ಹೊರ ದೇಶಗಳ ಮೇಲೆ ಹೊಸ ಸುಂಕ ಹೇರಿಕೆ |
|---|---|---|
| ಮಿತಿ ಮೀರಿದ ಕ್ರಮ | 51% | 58% |
| ನಿರೀಕ್ಷೆಯಂತೆ ಇಲ್ಲ | 18% | 10% |
| ಸರಿಯಾದ ಕ್ರಮ | 30% | 30% |
| ಪ್ರತಿಕ್ರಿಯೆ ನೀಡದವರು | 1% | 2% |




## 365 ದಿನಗಳಲ್ಲಿ 365 ಗೆಲುವು

ಒಂದು ವರ್ಷದಲ್ಲಿ ಟ್ರಂಪ್ ಆಡಳಿತ ಕೈಗೊಂಡ ಕ್ರಮಗಳ ಪಟ್ಟಿಯನ್ನು ಶ್ವೇತಭವನ ಬಿಡುಗಡೆ ಮಾಡಿದೆ. ‘365 ದಿನಗಳಲ್ಲಿ 365 ಗೆಲುವು’ ಎಂಬ ತಲೆಬರಹದ ಅಡಿಯಲ್ಲಿ 365 ಸಾಧನೆಗಳನ್ನು ಪಟ್ಟಿ ಮಾಡಲಾಗಿದೆ. ವಲಸಿಗರು, ಕ್ರಿಮಿನಲ್‌ಗಳು, ಮಾದಕ ದ್ರವ್ಯ ಕಳ್ಳಸಾಗಣೆ ವಿರುದ್ಧ ಕೈಗೊಂಡ ಕ್ರಮಗಳು, ಜಾಗತಿಕ ಮಟ್ಟದಲ್ಲಿ ಅಮೆರಿಕದ ನಾಯಕತ್ವ, ಅರ್ಥವ್ಯವಸ್ಥೆ ಸುಧಾರಣೆಗೆ ತೆಗೆದುಕೊಂಡ ನಿರ್ಧಾರಗಳು, ಅನಗತ್ಯ ವೆಚ್ಚಕ್ಕೆ ನಿಯಂತ್ರಣ, ದೇಶದಲ್ಲಿ ಉದ್ಯೋಗ ಸೃಷ್ಟಿ, ಅಮೆರಿಕದ ನಾಗರಿಕರ ಜೀವನ ಸುಧಾರಣೆಗೆ ಒತ್ತು, ಸೇನೆಯ ಬಲವರ್ಧನೆ... ಸೇರಿದಂತೆ ಹಲವು ವಿಚಾರಗಳು ಇದರಲ್ಲಿದೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ಸ್ಥಗಿತಗೊಂಡಿದ್ದು ಕೂಡ ಈ ಪಟ್ಟಿಯಲ್ಲಿ (144ನೆಯದ್ದು) ಸ್ಥಾನ ಪಡೆದಿದೆ.

## ವರ್ಷದಲ್ಲಿ ಮಾಡಿದ್ದು

**7** ದೇಶಗಳ ಮೇಲೆ ಬಾಂಬ್ ದಾಳಿ

**229** ಹೊರಡಿಸಿರುವ ಕಾರ್ಯಾದೇಶಗಳು. ಅಧಿಕಾರ ವಹಿಸಿಕೊಂಡ ದಿನವೇ 26 ಕಾರ್ಯಾದೇಶಗಳಿಗೆ ಟ್ರಂಪ್ ಸಹಿ ಹಾಕಿದ್ದರು. ವರ್ಷದಲ್ಲಿ ಗರಿಷ್ಠ ಕಾರ್ಯಾದೇಶ ಹೊರಡಿಸಿರುವ ಎರಡನೇ ಅಧ್ಯಕ್ಷ ಇವರು. ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರು ತಮ್ಮ ಮೂರನೇ ಅವಧಿಯಲ್ಲಿ ಎರಡನೇ ವಿಶ್ವ ಯುದ್ಧಕ್ಕೂ ಮೊದಲು ಒಂದೇ ವರ್ಷದಲ್ಲಿ 381 ಆದೇಶಗಳಿಗೆ ಸಹಿ ಹಾಕಿದ್ದರು

**88** ಕ್ಷಮಾದಾನ ನೀಡಿರುವ ಜನರ ಸಂಖ್ಯೆ. ಮೊದಲ ದಿನವೇ ಆರು ಮಂದಿಗೆ ಅವರು ಕ್ಷಮಾದಾನ ನೀಡಿದ್ದರು

**100** ಭೇಟಿ ಮಾಡಿದ ಹೊರದೇಶಗಳ ನಾಯಕರು. ಈ ಪೈಕಿ 49 ಮಂದಿಯನ್ನು ಶ್ವೇತ ಭವನದಲ್ಲೇ ಅವರು ಭೇಟಿಯಾಗಿದ್ದಾರೆ

**13** ವಿದೇಶ ಪ್ರವಾಸ

**6.05** ಲಕ್ಷ ಗಡಿಪಾರು ಮಾಡಿದ ಅಕ್ರಮ ವಲಸಿಗರು

**19** ಲಕ್ಷ ಸ್ವಯಂ ಪ್ರೇರಿತರಾಗಿ ಗಡಿಪಾರುಗೊಂಡ ವಲಸಿಗರು

**16** ಲಕ್ಷ ಟ್ರಂಪ್ ವಲಸೆ ನೀತಿಯಿಂದ ಕಾನೂನು ಪ್ರಕಾರವಾಗಿ ಹೊಂದಿದ್ದ ವಲಸಿಗ ಸ್ಥಾನಮಾನ ಕಳೆದುಕೊಂಡವರು

## ‘ಮನಶ್ಶಾಂತಿ’ ಕದಡಿದ ನೊಬೆಲ್ ಶಾಂತಿ ಪ್ರಶಸ್ತಿ

ಮೊದಲ ವರ್ಷದಲ್ಲೇ ಟ್ರಂಪ್ ಕಣ್ಣಿಟ್ಟಿದ್ದು ನೊಬೆಲ್ ಶಾಂತಿ ಪ್ರಶಸ್ತಿ ಮೇಲೆ. ಜಗತ್ತಿನ ಶಾಂತಿದೂತ ಎಂದು ತಮ್ಮನ್ನು ಬಿಂಬಿಸಿಕೊಂಡಿದ್ದ ಅವರು, ‘ನಾನು ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ. ನೊಬೆಲ್ ಶಾಂತಿ ಪ್ರಶಸ್ತಿ ನನಗೇ ಸಿಗಬೇಕು’ ಎಂದು ಪ್ರತಿಪಾದಿಸುತ್ತಾ ಬಂದಿದ್ದರು. ಪಾಕಿಸ್ತಾನ, ಇಸ್ರೇಲ್ ಸೇರಿದಂತೆ ಕೆಲವು ರಾಷ್ಟ್ರಗಳು ಟ್ರಂಪ್ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ಶಿಫಾರಸು ಮಾಡಿದ್ದವು. ಆದರೆ, ನಾರ್ವೆಯ ನೊಬೆಲ್ ಫೌಂಡೇಷನ್ ವೆನೆಜುವೆಲಾದ ವಿಪಕ್ಷ ನಾಯಕಿ ಮಾರಿಯಾ ಕೊರಿನಾ ಮಚಾದೊ ಅವರನ್ನು ಆಯ್ಕೆ ಮಾಡಿತು. ಮರುದಿನ ಮಾಧ್ಯಮದವರೊಂದಿಗೆ ಮಾತನಾಡಿದ್ದ ಟ್ರಂಪ್, ‘ಪ್ರಶಸ್ತಿಗೆ ಆಯ್ಕೆಯಾಗಿರುವ ವ್ಯಕ್ತಿ ನನಗೆ ಕರೆ ಮಾಡಿದ್ದರು. ನಿಮ್ಮ ಗೌರವಾರ್ಥ ನಾನು ಇದನ್ನು ಸ್ವೀಕರಿಸುತ್ತಿದ್ದೇನೆ. ನಿಜವಾಗಲೂ ಈ ಪ್ರಶಸ್ತಿಗೆ ನೀವು ಅರ್ಹರು ಎಂದು ಹೇಳಿದ್ದಾರೆ’ ಎಂದಿದ್ದರು.



ವಾರದ ಹಿಂದೆ ಮಚಾದೊ, ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಹಸ್ತಾಂತರಿಸಿದ್ದರು. ಪ್ರಶಸ್ತಿಯನ್ನು ತಾವು ಸ್ವೀಕರಿಸುತ್ತಿರುವುದಾಗಿ ಅವರು ಹೇಳಿದ್ದರು. ಆದರೆ, ನೊಬೆಲ್ ಫೌಂಡೇಷನ್, ಒಬ್ಬರನ್ನು ಆಯ್ಕೆ ಮಾಡಿದ ನಂತರ ಪ್ರಶಸ್ತಿಯನ್ನು ಬೇರೆಯವರಿಗೆ ನೀಡುವ ಹಾಗಿಲ್ಲ ಎಂದು ಹೇಳಿತ್ತು. ಇದಕ್ಕೆ ಅಸಮಾಧಾನಗೊಂಡಿದ್ದ ಟ್ರಂಪ್ ನಾರ್ವೆ ಅಧ್ಯಕ್ಷರಿಗೆ ಪತ್ರ ಬರೆದು, ‘ಎಂಟಕ್ಕೂ ಹೆಚ್ಚು ಯುದ್ಧಗಳನ್ನು ನಿಲ್ಲಿಸಿದ ನನಗೆ ನೀವು ನೋಬೆಲ್ ಶಾಂತಿ ಪ್ರಶಸ್ತಿ ಕೊಡಬಾರದು ಎಂದು ತೀರ್ಮಾನಿಸಿರುವುದರಿಂದ, ನಾನು ಇನ್ನು ಮುಂದೆ ಕೇವಲ ಶಾಂತಿಯ ಬಗ್ಗೆಯೇ ಯೋಚಿಸಬೇಕೆಂದೇನೂ ಇಲ್ಲ. ಹಾಗಿದ್ದರೂ, ಅದು ಯಾವಾಗಲೂ ನನಗೆ ಪ್ರಮುಖ ವಿಷಯವಾಗಿರಲಿದೆ. ಆದರೆ, ಇನ್ನೀಗ ಅಮೆರಿಕಕ್ಕೆ ಯಾವುದು ಒಳ್ಳೆಯದು ಎಂಬುದರ ಬಗ್ಗೆ ನಾನು ಯೋಚಿಸಬಹುದು’ ಎಂದು ಹೇಳಿ ಗ್ರೀನ್‌ಲ್ಯಾಂಡ್ ಅಮೆರಿಕಕ್ಕೆ ಯಾಕೆ ಮುಖ್ಯ ಎಂಬುದನ್ನು ವಿವರಿಸಿದ್ದರು!

## ಗ್ರೀನ್‌ಲ್ಯಾಂಡ್ ಮೇಲೆ ಕಣ್ಣು

ಡೆನ್ಮಾರ್ಕ್‌ನ ಅಧೀನದಲ್ಲಿರುವ ಹಿಮದ್ವೀಪ ಗ್ರೀನ್‌ಲ್ಯಾಂಡ್ ಮೇಲೆ ಮೊದಲಿನಿಂದಲೂ ಟ್ರಂಪ್ ಕಣ್ಣಿಟ್ಟಿದ್ದಾರೆ. ವೆನೆಜುವೆಲಾದ ಮೇಲೆ ಸೇನಾ ಕಾರ್ಯಾಚರಣೆ ನಡೆಸಿ ಅಲ್ಲಿನ ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಸೆರೆ ಹಿಡಿದು ಕರೆತಂದ ನಂತರ ಗ್ರೀನ್‌ಲ್ಯಾಂಡ್ ಅನ್ನು ವಶಕ್ಕೆ ಪಡೆಯುವ ಅವರ ಹೆಬ್ಬಯಕೆ ಇನ್ನಷ್ಟು ತೀವ್ರಗೊಂಡಿದೆ. ವಾರದಿಂದೀಚೆಗೆ ಅವರು ಹೋದಲ್ಲಿ ಬಂದಲ್ಲಿ ಗ್ರೀನ್‌ಲ್ಯಾಂಡ್‌ನ ಜಪ ಮಾಡುತ್ತಿದ್ದಾರೆ. ಅಮೆರಿಕದ ಪ್ರಯತ್ನಕ್ಕೆ ವಿರೋಧ ವ್ಯಕ್ತಪಡಿಸಿದ ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರಗಳ ಮೇಲೆ ಹೆಚ್ಚುವರಿ ಸುಂಕದ ಬರೆ ಎಳೆದಿದ್ದಾರೆ. ಕೆನಡಾ, ವೆನೆಜುವೆಲಾ ಮತ್ತು ಗ್ರೀನ್‌ಲ್ಯಾಂಡ್ ಕೂಡ ಅಮೆರಿಕಕ್ಕೆ ಸೇರಿದ್ದು ಎನ್ನುವ ಅರ್ಥ ಬರುವ, ಅವುಗಳ ಮ್ಯಾಪ್‌ನಲ್ಲಿ ಅಮೆರಿಕದ ಧ್ವಜದ ಬಣ್ಣಗಳನ್ನು ಬಳಿದಿರುವ ಎಐ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದಾರೆ. ಗ್ರೀನ್‌ಲ್ಯಾಂಡ್: ‘ಅಮೆರಿಕದ ಭೂಭಾಗ, ಸ್ಥಾಪನೆ 2026’ ಎಂದು ಫಲಕದಲ್ಲಿ ಬರೆದು ಟ್ರಂಪ್ ಅವರು ಅಮೆರಿಕದ ಧ್ವಜವನ್ನು ಗ್ರೀನ್‌ಲ್ಯಾಂಡ್‌ನಲ್ಲಿ ನೆಡುತ್ತಿರುವ ಎಐ ಚಿತ್ರವನ್ನೂ ಹಂಚಿಕೊಂಡಿದ್ದಾರೆ.

## ಯುದ್ಧ ಸ್ಥಗಿತ: 70 ಬಾರಿ ಜಪ

2025ರ ಮೇ 7ರಿಂದ 10ರವರೆಗೆ ಭಾರತ ಮತ್ತು ಪಾಕಿಸ್ತಾನ ನಡುವೆ ನಡೆದಿದ್ದ ಯುದ್ಧವನ್ನು ನಿಲ್ಲಿಸಿದ್ದು ತಾವೇ ಎಂದು ಟ್ರಂಪ್ ಅವರು ಒಂಬತ್ತು ತಿಂಗಳಲ್ಲಿ 70 ಬಾರಿ ಹೇಳಿದ್ದಾರೆ. ಪಾಕಿಸ್ತಾನವು ಇದನ್ನು ಅನುಮೋದಿಸಿ, ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಬೇಕು ಎಂದು ಶಿಫಾರಸು ಮಾಡಿದ್ದರೂ, ಭಾರತವು ಟ್ರಂಪ್ ಅವರ ಮಧ್ಯಪ್ರವೇಶವನ್ನು ನಿರಾಕರಿಸುತ್ತಲೇ ಬಂದಿದೆ. ಶಾಂತಿ ಪ್ರಶಸ್ತಿಯ ವಿಷಯ ಬಂದಾಗಲೆಲ್ಲ ಭಾರತ ಮತ್ತು ಪಾಕಿಸ್ತಾನ ನಡುವಿನ ಸೇನಾ ಸಂಘರ್ಷವನ್ನು ಪ್ರಸ್ತಾಪಿಸುವ ಅವರು, ‘ಸುಂಕ ಹೇರಿಕೆಯ ಒತ್ತಡವನ್ನು ಹಾಕಿ ಸಂಭವನೀಯ ಪರಮಾಣು ಸಂಘರ್ಷವನ್ನು ತಡೆದಿದ್ದೇನೆ’ ಎಂದು ಹೇಳುತ್ತಾ ಬಂದಿದ್ದಾರೆ.

ಅವರ ಮಾತನ್ನು ಒಪ್ಪದಿರುವುದಕ್ಕೆ ಭಾರತದ ಮೇಲೆ ಅಸಮಾಧಾನವನ್ನೂ ಹೊಂದಿದ್ದಾರೆ. ತಮ್ಮನ್ನು ಹೊಗಳಿದ ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸೀಂ ಮುನೀರ್ ಅವರನ್ನು ಅಮೆರಿಕಕ್ಕೆ ಆಹ್ವಾನಿಸಿ ಔತಣವನ್ನೂ ನೀಡಿದ್ದಾರೆ.

## ವಿಚಿತ್ರ ಹೇಳಿಕೆಗಳು

- ‘ಟ್ರಂಪ್ ಯಾವುದರ ಬಗ್ಗೆ ಏನು ಹೇಳಿದರೂ ಅದು ಸರಿಯಾಗಿರುತ್ತೆ. ಹೌದಲ್ಲವೇ?’
- ‘ಸರ್ಕಾರದ ಇಲಾಖೆ, ವಾಣಿಜ್ಯ ಇಲಾಖೆ ಅಥವಾ ಬೊಕ್ಕಸಕ್ಕೆ ನಾನು ಹೋದರೆ, ಅಲ್ಲಿ ಏನಾದರೂ ನನಗೆ ಇಷ್ಟವಾದರೆ, ಅದನ್ನು ತೆಗೆದುಕೊಳ್ಳಲು ನನಗೆ ಅನುಮತಿ ಇದೆ’
- ‘ಪೋಪ್ ಆಗಲು ನಾನು ಇಷ್ಟಪಡುತ್ತೇನೆ. ಅದು ನನ್ನ ಪ್ರಥಮ ಆಯ್ಕೆ’ (ಪೋಪ್ ಫ್ರಾನ್ಸಿಸ್ ಮೃತರಾದ ನಂತರ ಹೇಳಿದ್ದು)
- ‘ಸುಂಕ ಎನ್ನುವುದು ನನ್ನ ನೆಚ್ಚಿನ ಪದ’
- ‘ಗಾಜಾವನ್ನು ಕೊಂಡುಕೊಳ್ಳಲು ಮತ್ತು ಅದರ ಮಾಲೀಕತ್ವ ಸಾಧಿಸಲು ನಾನು ಬದ್ಧನಾಗಿದ್ದೇನೆ’
- ‘ಕರೋಲಿನ್! ತಮ್ಮ ಸುಂದರ ಮುಖದೊಂದಿಗೆ ಆಕೆ ಎದ್ದುನಿಲ್ಲುತ್ತಾಳೆ ಮತ್ತು ಆಕೆಯ ಸುಂದರ ತುಟಿಗಳು ಮಷೀನ್ ಗನ್‌ನಂತೆ ನಿರಂತರವಾಗಿ, ತಡೆಯೇ ಇಲ್ಲದಂತೆ ಉಲಿಯುತ್ತಲೇ ಇರುತ್ತವೆ’ (ತಮ್ಮ ಮಾಧ್ಯಮ ಕಾರ್ಯದರ್ಶಿ ಕರೋಲಿನಾ ಲೀವಿಟ್ಟ ಟಿ.ವಿ ಶೋಗಳಲ್ಲಿ ಮಾತನಾಡುವ ಬಗ್ಗೆ)
- ‘ವಿಶ್ವಸಂಸ್ಥೆಯಿಂದ ನನಗೆ ಸಿಕ್ಕಿದ್ದು ಒಂದು ಕೆಟ್ಟುಹೋದ ಟೆಲಿಪ್ರಾಂಪ್ಟರ್ ಮತ್ತು ಅರ್ಧದಲ್ಲಿ ಕೆಟ್ಟುನಿಲ್ಲುವ ಎಸ್ಕಲೇಟರ್. ಅಮೆರಿಕದ ಮೊದಲ ಮಹಿಳೆಯ (ಟ್ರಂಪ್ ಪತ್ನಿ) ದೇಹದ ಆಕಾರ ಚೆನ್ನಾಗಿದೆ, ಇಲ್ಲದಿದ್ದರೆ ಕುಸಿದುಬೀಳುತ್ತಿದ್ದಳು. ನಮ್ಮಿಬ್ಬರ ಆಕಾರಗಳೂ ಚೆನ್ನಾಗಿವೆ’ (ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಎಸ್ಕಲೇಟರ್ ಕೆಟ್ಟುನಿಂತಾಗ)
- ಆತ ಹಾಗೆ ಹೇಳಿದನೆ? ಇರಲಿ, ಅಷ್ಟಕ್ಕೂ ಆತ ಬರೋದು ಯಾರಿಗೂ ಬೇಡ ಬಿಡಿ. ಏಕೆಂದರೆ, ಶೀಘ್ರದಲ್ಲೇ ಆತ ಕುರ್ಚಿಯಿಂದ ಕೆಳಗಿಳಿಯುತ್ತಾನೆ. ಅವರ ವೈನ್ ಮತ್ತು ಶ್ಯಾಂಪೇನ್ ಮೇಲೆ ನಾನು ಶೇ 200 ಸುಂಕ ವಿಧಿಸುತ್ತೇನೆ. ಆಗ ಆತ ನಮ್ಮೊಂದಿಗೆ ಸೇರಲು ಬರುತ್ತಾನೆ. ಆಗ, ಆತನ್ನು ನಾವು ಸೇರಿಸಬೇಕೆಂದೇನೂ ಇಲ್ಲ’ (ತಾವು ಪ್ರಸ್ತಾಪಿಸಿರುವ ಶಾಂತಿ ಮಂಡಳಿಗೆ ಸೇರಲು ನಿರಾಕರಿಸಿದ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಹೇಳಿಕೆ ಬಗ್ಗೆ)

**ನಾನು ಏಳು ಯುದ್ಧಗಳನ್ನು ನಿಲ್ಲಿಸಿದ್ದೇನೆ. ಆ ಎಲ್ಲ ದೇಶಗಳ ನಾಯಕರೊಂದಿಗೂ ಮಾತನಾಡಿದ್ದೇನೆ. ಆದರೆ, ವಿಶ್ವಸಂಸ್ಥೆಯಿಂದ ನನಗೆ ಕನಿಷ್ಠ ಒಂದು ಫೋನ್ ಕರೆ ಕೂಡ ಬಂದಿಲ್ಲ**

ಆಧಾರ: ರಾಯಿಟರ್ಸ್, ಪಿಟಿಐ, ದಿ ನ್ಯೂಯಾರ್ಕ್ ಟೈಮ್ಸ್, ಎನ್‌ಬಿಸಿ

Publication Date
22/01/2026

Presented by

## ❖ 'ಅರಾವಳಿ: ತಜ್ಞರ ಸಮಿತಿ ರಚನೆ'

**ಸಂದರ್ಭ: ಮರುವ್ಯಾಖ್ಯಾನ ಮತ್ತು ಅಕ್ರಮ ಗಣಿಗಾರಿಕೆ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ, ಅರಾವಳಿ ಪರ್ವತ ಶ್ರೇಣಿ ಎಂದರೆ ಯಾವುದು ಎಂಬ ವ್ಯಾಖ್ಯಾನ ಬದಲಿಸಿರುವ ಕೇಂದ್ರ ಸರ್ಕಾರದ ಕ್ರಮದ ಕುರಿತು ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಇಲ್ಲಿ ಅಕ್ರಮವಾಗಿ ನಡೆಸಲಾಗುತ್ತಿರುವ ಗಣಿಗಾರಿಕೆ ಮತ್ತು ಇದರಿಂದ ಪರಿಸರಕ್ಕೆ ಆಗುತ್ತಿರುವ ಹಾನಿ, ಜೊತೆಗೆ ಅರಾವಳಿಯ ವ್ಯಾಖ್ಯಾನ ಏನಾಗಬೇಕು ಎಂಬ ಕುರಿತು ಪರಿಶೀಲನೆ ನಡೆಸಲು ತಜ್ಞರ ಸಮಿತಿ ರಚಿಸುವುದಾಗಿ ಹೇಳಿದೆ.**

- ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು 2025ರ ಡಿ.29ರಿಂದ ಸ್ವಯಂ ಪ್ರೇರಿತ ವಿಚಾರಣೆ ಆರಂಭಿಸಿದೆ. ಇದರ ಭಾಗ ವಾಗಿ ವಿಚಾರಣೆ ನಡೆಸಿತು.
- ತಜ್ಞರ ಸಮಿತಿಯಲ್ಲಿ ಯಾರು ಇರಬೇಕು ಎಂಬ ಬಗ್ಗೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಮತ್ತು ಕೆ.ಎಂ. ನಟರಾಜ್, ವಿಚಾರಣೆಯಲ್ಲಿ ನ್ಯಾಯಾಲಯಕ್ಕೆ ಅಮ್ಯುಕಸ್ ಕ್ಯೂರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕೆ.ಪರಮೇಶ್ವರ ಅವರ ಸಲಹೆಯನ್ನು ಪೀಠ ಕೇಳಿತು. ಪರಿಸರವಾದಿಗಳು ಮತ್ತು ಅರಣ್ಯ ತಜ್ಞರ ಹೆಸರುಗಳನ್ನು ನಾಲ್ಕು ವಾರಗಳ ಒಳಗೆ ನೀಡಬೇಕು ಎಂದೂ ಗಡುವು ನೀಡಿತು.
- ಈ ಸಮಿತಿಯು ಸುಪ್ರೀಂ ಕೋರ್ಟ್ ನಿರ್ದೇಶನ ಮತ್ತು ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸಲಿದೆ ಎಂದು ಪೀಠ ಹೇಳಿತು. ಅರಾವಳಿ ಪರ್ವತ ಶ್ರೇಣಿ ಯಾವುದು ಎಂಬ ಮರುವ್ಯಾಖ್ಯಾನಕ್ಕೆ ಒಪ್ಪಿಗೆ ನೀಡಿದ್ದ ತನ್ನ ಆದೇಶಕ್ಕೆ ಈ ಹಿಂದೆಯೇ ನ್ಯಾಯಾಲಯ ತಡೆ ನೀಡಿತ್ತು. ಈ ತಡೆಯನ್ನು ಬುಧವಾರ ಮುಂದಿನ ಆದೇಶದವರೆಗೂ ವಿಸ್ತರಿಸಿತು.

**'ಅಕ್ರಮ ಗಣಿಗಾರಿಕೆ ನಡೆಸಲಾಗುತ್ತಿದೆ'**

- 'ಪರ್ವತ ಶ್ರೇಣಿಯ ಕೆಲವು ಭಾಗಗಳಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗಿದೆ. ಮರಗಳನ್ನು ಕಡಿಯಲಾಗುತ್ತಿದೆ. ಇದನ್ನು ನಿಲ್ಲಿಸಲೇಬೇಕು' ಎಂದು ರಾಜಸ್ಥಾನದ ರೈತರ ಪರವಾದ ಮಂಡಿಸುತ್ತಿರುವ ಹಿರಿಯ ವಕೀಲ ರಾಜು ರಾಮಚಂದ್ರನ್ ಅವರು ಪೀಠದ ಗಮನಕ್ಕೆ ತಂದರು.
- *ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ನಮ್ಮ ಗಮನಕ್ಕೆ ತಂದರೆ, ನಾವು ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಅಕ್ರಮ ಗಣಿಗಾರಿಕೆಯು ಸರಿಪಡಿಸಲು ಸಾಧ್ಯವಾಗದಂಥ ಪರಿಸ್ಥಿತಿಯನ್ನು ತಂದೊಡ್ಡುತ್ತದೆ ಮತ್ತು ಇದು ಅಪರಾಧ. ಅದ್ದರಿಂದ ಇದನ್ನು ನಿಲ್ಲಿಸಲೇಬೇಕು' ಎಂದು ಸಿಜೆಐ ಸೂರ್ಯಕಾಂತ್ ಹೇಳಿದರು. 'ರಾಜಸ್ಥಾನ ಸರ್ಕಾರವು ಈ ವಿಚಾರ ವನ್ನು ಕೂಡಲೇಗಮನಿಸಬೇಕು' ಎಂದು ಪೀಠ ಸೂಚಿಸಿತು.ರಾಜಸ್ಥಾನ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಅವರು ಇದಕ್ಕೆ ಪ್ರತಿಕ್ರಿಯಿಸಿ, 'ಅಕ್ರಮ ಗಣಿಗಾರಿಕೆ "ಯನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದರು.

**'ವ್ಯಾಖ್ಯಾನಿಸುವುದರಿಂದಲೇ ಸಮಸ್ಯೆ'**

- ಎ.ಡಿ.ಸಿಂಗ್ ಎಂಬುವರ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಮಧ್ಯಂತರ ಅರ್ಜಿಸಲ್ಲಿಸಿದರು.
- 'ಅರಾವಳಿ ಪರ್ವತ ಶ್ರೇಣಿಯನ್ನು ವ್ಯಾಖ್ಯಾನಿಸಲು ಬರುವುದಿಲ್ಲ. ಬೆಟ್ಟಗಳನ್ನೇ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಭೂ ಪದರಗಳ ಅಡಿಯ ಪದರಗಳು ನಿರಂತರವಾಗಿ ಬದಲಾಗುತ್ತಲೇ ಇರುತ್ತವೆ. **ಅರಾವಳಿ ವಿಚಾರದಲ್ಲಿ ಈಪದರವು ಗುಜರಾತ್‌ನಿಂದ ಉತ್ತರ ಪ್ರದೇಶದ ತುದಿಯವರೆಗೂ ಇದೆ.ಅರಾವಳಿಯನ್ನು ವ್ಯಾಖ್ಯಾನಿಸಲು ಇಳಿದರೆ, ಸಮಸ್ಯೆ ಅಲ್ಲಿಂದಲೇ ಆರಂಭವಾಗುತ್ತದೆ.** ಮೊದಲಿಗೆ ಈ ವಿಚಾರವನ್ನು ವಿಚಾರಣೆಗೆ ಪರಿಗಣಿಸಬೇಕು' ಎಂದು ಸಿಬಲ್ ವಾದಿಸಿದರು.

Dr Rajkumar IAS/KAS Academy

## ❖ 2030ರವರೆಗೆ ಅಟಲ್ ಪಿಂಚಣಿ ಯೋಜನೆ ವಿಸ್ತರಣೆಗೆ ಅಸ್ತು

**ಸಂದರ್ಭ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಅಟಲ್ ಪಿಂಚಣಿ ಯೋಜನೆಯನ್ನು 2030-31ನೇ ಹಣಕಾಸು ವರ್ಷದ ವರೆಗೆ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದಿಸಿದೆ.**


- ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯು, ಅಸಂಘಟಿತ ವಲಯದ ಕಾರ್ಮಿಕರ ಕಲ್ಯಾಣಕ್ಕೆ ರೂಪಿಸಿರುವ ಯೋಜನೆಗಳಿಗೆ ಆರ್ಥಿಕ ನೆರವು ಮುಂದುವರಿಸುವುದಕ್ಕೂ ಅನುಮೋದನೆ ನೀಡಿದೆ ಎಂದು `ಪ್ರಕಟಣೆ ತಿಳಿಸಿದೆ.
- ಅಸಂಘಟಿತ ವಲಯದ ಕಾರ್ಮಿಕರಿಗೆ ವೃದ್ಧಾಪ್ಯ ದಲ್ಲಿ ಆದಾಯ ಭದ್ರತೆ ಒದಗಿಸುವ ದೃಷ್ಟಿಯಿಂದ ಅಟಲ್ ಪಿಂಚಣಿ ಯೋಜನೆಯನ್ನು 2015ರ ಮೇ 9ರಂದು ಆರಂಭಿಸಲಾಯಿತು. ಪ್ರಸ್ತುತ, 8.66 ಕೋಟಿ ಜನರು ಈ ಯೋಜನೆಯಡಿ ನೋಂದಾಯಿಸಿ ಕೊಂಡಿದ್ದಾರೆ.
- ನೋಂದಾಯಿತ ಸದಸ್ಯರು ಪಾವತಿಸಿದ ವಂತಿಗೆ ಆಧಾರದಲ್ಲಿ, ಫಲಾನುಭವಿಗೆ 60 ವರ್ಷ ತುಂಬಿದ ನಂತರ ಮಾಸಿಕ ಕನಿಷ್ಠ ಒಂದು ಸಾವಿರ ರೂಪಾಯಿಯಿಂದ ₹5 ಸಾವಿರ ವರೆಗೆ ಪಿಂಚಣಿ ನೀಡಲಾಗುತ್ತದೆ.




## ❖ ಲೋಕಪಾಲಕ್ಕೆ ಕಾಲಾವಕಾಶ

**ಸಂದರ್ಭ: 'ಪ್ರಶ್ನೆಗಾಗಿ ಲಂಚ' ಪ್ರಕರಣದಲ್ಲಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಸಿಬಿಐಗೆ ಅನುಮತಿ ನೀಡುವ ವಿಚಾರವನ್ನು ಕಾನೂನಿನ ಪ್ರಕಾರ ಪರಿಗಣಿಸಲು ಲೋಕಪಾಲಕ್ಕೆ ನೀಡಿದ್ದ ಕಾಲಾವಕಾಶವನ್ನು ದೆಹಲಿ ಹೈಕೋರ್ಟ್ ಎರಡು ತಿಂಗಳು ವಿಸ್ತರಿಸಿದೆ.**

- ನ್ಯಾಯಮೂರ್ತಿಗಳಾದ ಅನಿಲ್ ಕ್ಷೇತ್ರಪಾಲ್ ಮತ್ತು ಹರೀಶ್ | ವೈದ್ಯನಾಥನ್ ಶಂಕರ್ ಅವರ ಪೀಠವು, ಸಮಯ ವಿಸ್ತರಣೆ ಕೋರಿ ಇನ್ನು ಮುಂದೆ ಸಲ್ಲಿಸುವ ಯಾವುದೇ ಮನವಿಯನ್ನು ಪರಿಗಣಿಸುವುದಿಲ್ಲ ಎಂದು ಹೇಳಿತು.
- ಮಹುವಾ ಮತ್ತು ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ಪರ ವಾದ ಮಂಡಿಸಿದ ವಕೀಲರು, 'ಕಾಲಾವಕಾಶವನ್ನು ಎರಡು ತಿಂಗಳು ವಿಸ್ತರಿಸಬೇಕೆಂಬ ಲೋಕಪಾಲದ ಮನವಿಯನ್ನು ನಾವು ವಿರೋಧಿಸುತ್ತಿಲ್ಲ' ಎಂದು ಹೇಳಿದರು.



ಐದು ಪಾಲಿಕೆ, ಸ್ಥಳೀಯ ಸಂಸ್ಥೆ ಚುನಾವಣೆ: ಹಲವು ಸವಾಲು

ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳೂ ಸೇರಿದಂತೆ ಹಲವು ಸ್ಥಳೀಯ ಸಂಸ್ಥೆಗಳ ಚುನಾವಣೆ ಕುರಿತು ಸಾಕಷ್ಟು ಚರ್ಚೆ ನಡೆಯುತ್ತಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆಗೆ ಮುಹೂರ್ತ ನಿಗದಿಯಾಗಿದೆ. ವಿದ್ಯುನ್ಮಾನ ಮತಯಂತ್ರದ (ಇವಿಎಂ) ಬದಲು ಮತಪತ್ರಗಳನ್ನು (ಬ್ಯಾಲೆಟ್ ಪೇಪರ್) ಬಳಸಿ ಚುನಾವಣೆ ನಡೆಸುವುದಾಗಿ ರಾಜ್ಯ ಚುನಾವಣಾ ಆಯೋಗ ಘೋಷಿಸಿದೆ. ಇನ್ನೊಂದೆಡೆ ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳ ಆಡಳಿತದ ಅವಧಿ ಮುಗಿದು ಐದು ವರ್ಷಗಳಾದರೂ ಚುನಾವಣೆ ನಡೆದಿಲ್ಲ. ಸರ್ಕಾರದ ವಿಳಂಬ ಧೋರಣೆ ವಿರುದ್ಧ ಆಯೋಗ ಕೋರ್ಟ್ ಮೆಟ್ಟಿಲೇರಿದೆ. ಸರ್ಕಾರ ಮೂರೂ ಸ್ತರಗಳಿಗೆ ಒಟ್ಟಿಗೆ ಚುನಾವಣೆ ನಡೆಸಲು ಚಿಂತಿಸುತ್ತಿದೆ. ಈ ಎಲ್ಲ ಬೆಳವಣಿಗೆಗಳ ಕುರಿತು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ಅವರ ಜತೆ 'ಪ್ರಜಾವಾಣಿ' ನಡೆಸಿದ ಮಾತುಕತೆಯ ಸಾರ ಇಲ್ಲಿದೆ

ಜಿ.ಎಸ್.ಸಂಗ್ರೇಶಿ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ಸಂದರ್ಶನ

• **ಬಹಳಷ್ಟು ಬೇಡಿಕೆಗಳು, ಪ್ರಯೋಗಗಳ ತರುವಾಯ ಇವಿಎಂ ಜಾರಿಗೆ ತರಲಾಗಿದೆ. ಮತ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕಾದ ಆಯೋಗ, ಹಿಂದಕ್ಕೆ ಚಲಿಸಲು ಹೊರಟಿದೆಯಲ್ಲ?**

ಮತಪತ್ರ ಬಳಸಬಾರದು ಎಂದು ಯಾವ ಕಾನೂನು ಕೂಡ ಹೇಳಿಲ್ಲ. ಚುನಾವಣಾ ಆಯೋಗ ಸ್ವತಂತ್ರ ಆಯೋಗವಾಗಿದ್ದರೂ ಕಾಯ್ದೆಗಳ ಪ್ರಕಾರವೇ ಕಾರ್ಯನಿರ್ವಹಿಸುತ್ತದೆ. ಚುನಾವಣೆಗಳನ್ನು ನಡೆಸುತ್ತದೆ. ಯಾವುದೇ ಚುನಾವಣೆಗಳನ್ನು ಇವಿಎಂ ಅಥವಾ ಮತಪತ್ರ ಬಳಸಿ ಮಾಡಬಹುದು ಎಂದು ಚುನಾವಣಾ ನಿಯಮಗಳೇ ಹೇಳುತ್ತವೆ. ಅಂತಹ ನಿಯಮಗಳ ಅನ್ವಯವೇ ನಿರ್ಧಾರ ತೆಗೆದುಕೊಳ್ಳಲಾಗಿದೆ. ರಾಜ್ಯ ಸರ್ಕಾರ ಈಚೆಗೆ ಜಾರಿಗೆ ತಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಚುನಾವಣೆ) ಕಾಯ್ದೆ–2025ರಲ್ಲೂ ಚುನಾವಣೆಗಳನ್ನು ಮತಪತ್ರ ಬಳಸಿ ನಡೆಸಬಹುದು ಎಂಬ ಅಂಶವನ್ನು ನಿಯಮ 37, 57ರಲ್ಲಿ ಉಲ್ಲೇಖಿಸಲಾಗಿದೆ. ಈ ನಿಯಮಗಳ ಅನ್ವಯವೇ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ಪಾಲಿಕೆಗಳಿಗೆ ಮತಪತ್ರ ಬಳಸಿ ಚುನಾವಣೆ ನಡೆಸಲು ನಿರ್ಧರಿಸಿದ್ದೇವೆ.

• **ಮತಪತ್ರ ಬಳಕೆ ಮತದಾನದ ಅವಧಿಯ ಹಿಗ್ಗುವಿಕೆಗೆ ಕಾರಣವಾಗುತ್ತದೆಯಲ್ಲ?**

ಬಿಬಿಎಂಪಿ ಚುನಾವಣೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆದು ಎಷ್ಟು ವರ್ಷಗಳಾಗಿವೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಪ್ರಜಾಪ್ರಭುತ್ವದಲ್ಲಿ ಅವಧಿ ಮುಗಿದ ನಂತರವೂ ನಡೆಯುವ ಚುನಾವಣೆ, ವಿವಿಧ ಹಂತಗಳ ಬಳಿಕ ಪ್ರಕಟವಾಗುವ ಫಲಿತಾಂಶಕ್ಕಾಗಿ ತಾಳ್ಮೆಯಿಂದ ಕಾಯುವ ಜನರು ಮತದಾನಕ್ಕಾಗಿ ಮೂರು, ನಾಲ್ಕು ಗಂಟೆ ಹೆಚ್ಚು ಅವಧಿ ತೆಗೆದುಕೊಂಡರೆ ಸಹಿಸುವುದಿಲ್ಲವೇ? ಮತಪತ್ರ ಬಳಕೆಯಲ್ಲೂ ತ್ವರಿತ ಮತದಾನಕ್ಕೆ ಅಗತ್ಯವಾದ ಕ್ರಮವನ್ನು ಆಯೋಗ ತೆಗೆದುಕೊಳ್ಳಲಿದೆ.

• **ಇವಿಎಂನಂತಹ ಆಧುನಿಕ ವಿಧಾನ ಅವಳವಡಿಕೆಯ ನಂತರವೂ ನಗರ ಪ್ರದೇಶಗಳಲ್ಲಿ ಮತದಾನ ಪ್ರಮಾಣ ಕಡಿಮೆಯಾಗುತ್ತಿದೆ. ಮತಪತ್ರ ಬಳಕೆಯಿಂದ ಇನ್ನಷ್ಟು ಇಳಿಕೆ ಆಗುವುದಿಲ್ಲವೇ?**

ಮತಪತ್ರ ಅಥವಾ ಇವಿಎಂ ಬಳಕೆಗೂ ಮತದಾನ ಪ್ರಮಾಣದ ಇಳಿಕೆಗೂ ಸಂಬಂಧವಿಲ್ಲ. ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆ, ಸಹಕಾರ ಸಂಘಗಳ ಚುನಾವಣೆ ಸೇರಿದಂತೆ ಹಲವೆಡೆ ಇಂದಿಗೂ ಮತಪತ್ರ ಬಳಕೆಯೇ ಮುಂದುವರಿದಿದೆ. ಸುಮಾರು 6,000 ಗ್ರಾಮ ಪಂಚಾಯಿತಿಗಳಿಗೆ ನಡೆಸುವ ಚುನಾವಣೆಯಲ್ಲಿ ಇದುವರೆಗೂ ಮತಪತ್ರವನ್ನೇ ಬಳಸಲಾಗಿದೆ. 2.97 ಕೋಟಿ ಮತದಾರರು ಇದ್ದಾರೆ. ಅಲ್ಲಿ ಮತಪತ್ರ ಯಶಸ್ವಿಯಾಗಿ ಬಳಸಲಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ 80ರಿಂದ 90 ಲಕ್ಷ ಮತದಾರರು ಇದ್ದಾರೆ. ಇಷ್ಟು ಮತದಾರರಿಗೆ ಮತಪತ್ರಗಳನ್ನು ಬಳಕೆ ಮಾಡುವುದರಲ್ಲಿ ಯಾವ ಸಮಸ್ಯೆಯೂ ಇಲ್ಲ. ಮತಪ್ರಮಾಣ ಹೆಚ್ಚಳಕ್ಕೆ ಜಾಗೃತಿ ಮೂಡಿಸುವ ಹಲವು ಕ್ರಮಗಳನ್ನು ಆಯೋಗ ಕೈಗೊಳ್ಳಲಿದೆ.

• **ಮತಪತ್ರ ಬಳಸಲು ಅಗತ್ಯವಾದ ಮತಪೆಟ್ಟಿಗೆ ಇವೆಯೇ?**

ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಪಾಲಿಕೆಗಳಿಗೆ ಸಾಕಾಗುವಷ್ಟು ಮತಪೆಟ್ಟಿಗೆಗಳು ಇವೆ. 8 ಸಾವಿರಕ್ಕೂ ಹೆಚ್ಚು ಮತಪೆಟ್ಟಿಗೆಗಳು ಈಗಾಗಲೇ ಸಿದ್ಧ ಇವೆ. ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ಇನ್ನಷ್ಟು ಮತಪೆಟ್ಟಿಗೆಗಳ ಅಗತ್ಯವಿದೆ. ಖರೀದಿಗಾಗಿ ಅಗತ್ಯ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ.

• **ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆ ಐದು ವರ್ಷ ವಿಳಂಬ ಏಕೆ?**

ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ 2016ರ ಏಪ್ರಿಲ್‌ನಲ್ಲಿ ಚುನಾವಣೆ ನಡೆದಿತ್ತು. ಅಂದು ಆಯ್ಕೆಯಾಗಿದ್ದ ಸದಸ್ಯರ ಅವಧಿ 2021ರ ಏಪ್ರಿಲ್ 27ರಂದು ಮುಕ್ತಾಯವಾಗಿತ್ತು. ಚುನಾವಣೆಗೆ ಸಿದ್ಧತೆ ನಡೆದಿರುವಾಗಲೇ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆಯಲಾಗಿತ್ತು. ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದು 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ'ಕ್ಕೆ ನೀಡಲಾಗಿತ್ತು. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ವಿಳಂಬದ ವಿರುದ್ಧ ಹೈಕೋರ್ಟ್ ಮೊರೆ ಹೋಗಿದ್ದೇವೆ. ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಾಗಿ 2023ರ ಡಿಸೆಂಬರ್‌ನಲ್ಲೇ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿತ್ತು. ನಂತರ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆ ನಿಗದಿಪಡಿಸಲು ಸರ್ಕಾರ ರಚಿಸಿದ್ದ ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಆದರೆ, ಮೀಸಲಾತಿ ನಿಗದಿಯನ್ನು ಇಲ್ಲಿಯವರೆಗೂ ಅಂತಿಮಗೊಳಿಸಿಲ್ಲ.

• **ಚುನಾವಣೆ ನಡೆಸುವ ಕುರಿತು ಆಯೋಗದ ಮುಂದಿನ ನಡೆ ಏನು?**

ವಿಳಂಬಕ್ಕೆ ಹೈಕೋರ್ಟ್ ಈಗಾಗಲೇ ರಾಜ್ಯ ಸರ್ಕಾರಕ್ಕೆ ದಂಡ ವಿಧಿಸಿದೆ. ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ ಅವಧಿಯ ಒಳಗೆ ಚುನಾವಣೆ ನಡೆಸಲು ಸಹಕರಿಸಿಲ್ಲ ಎಂದು ಮತ್ತೊಂದು ನ್ಯಾಯಾಂಗ ನಿಂದನೆ ಪ್ರಕರಣವನ್ನು ದಾಖಲಿಸಿದ್ದೇವೆ. ಕೋರ್ಟ್ ಇದೇ ಜನವರಿ 30ರಂದು ಸಮಯ ನಿಗದಿ ಮಾಡಿದೆ. ಅಷ್ಟರ ಒಳಗೆ ಮತಕ್ಷೇತ್ರಗಳ ವಿವರ, ಮೀಸಲಾತಿ ಪಟ್ಟಿ ತಲುಪುವ ನಿರೀಕ್ಷೆ ಇದೆ. ಅವಧಿ ಮುಕ್ತಾಯಗೊಂಡ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಕ್ಷೇತ್ರಗಳ ಪಟ್ಟಿ ಹಾಗೂ ಮೀಸಲಾತಿ ಅಧಿಸೂಚನೆ ಹೊರಡಿಸದೇ ಇದ್ದರೆ, ಹಿಂದಿನ ಚುನಾವಣೆಯಲ್ಲಿ ನಿಗದಿ ಮಾಡಲಾಗಿದ್ದ ಕ್ಷೇತ್ರ ವಿಂಗಡಣೆ ಹಾಗೂ ಮೀಸಲಾತಿ ಅನ್ವಯವೇ ಚುನಾವಣೆ ನಡೆಸಬಹುದು ಎಂದು ಸುಪ್ರೀಂ ಕೋರ್ಟ್ ಆದೇಶವಿದೆ. ಜ.30ರ ನಂತರ ಈ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು.

• **ಎಷ್ಟು ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬವಾಗಿದೆ?**

ಮೈಸೂರು, ತುಮಕೂರು, ಶಿವಮೊಗ್ಗ, ದಾವಣಗೆರೆ, ಮಂಗಳೂರು ಸೇರಿ ಐದು ಮಹಾನಗರ ಪಾಲಿಕೆಗಳು, 192 ಇತರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕಿದೆ. ಹೊಸ ಪಟ್ಟಣ ಪಂಚಾಯಿತಿಗಳ ಘೋಷಣೆ, ಪುರಸಭೆ, ನಗರಸಭೆಗಳಾಗಿ ಮೇಲ್ದರ್ಜೆಗೆ ಏರಿಕೆ ಮಾಡಿದಾಗ ನಗರಗಳ ಸೆರಗಿನ ಹಲವು ಪಂಚಾಯಿತಿಗಳು ವಿಲೀನವಾಗುತ್ತವೆ. ಅವುಗಳನ್ನು ಸೇರಿಸಿ, ಕೆಲವನ್ನು ಕೈಬಿಟ್ಟು ಆಯಾ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡಬೇಕು. ಇಂತಹ ಕಾರ್ಯಗಳಲ್ಲಿ ವಿಳಂಬವಾಗುತ್ತಿದೆ. ಅಧಿಕಾರಿಗಳು, ಸರ್ಕಾರದ ಇಚ್ಛಾಶಕ್ತಿಯ ಕೊರತೆಯೂ ಇದಕ್ಕೆ ಕಾರಣ ಇರಬಹುದು. ಎರಡು ತಿಂಗಳಲ್ಲಿ ಶೇ 90ರಷ್ಟು ಗ್ರಾಮ ಪಂಚಾಯಿತಿಗಳ ಅವಧಿ ಮುಗಿಯುತ್ತದೆ. ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳನ್ನು ಪರಿಗಣಿಸಿ ಮೂರೂ ಸ್ತರಗಳ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕಿದೆ.

**ಎಲ್ಲ ಮತಗಟ್ಟೆಗಳಿಗೂ 'ವೆಬ್ ಕಾಸ್ಟಿಂಗ್'**

ಮೊದಲೆಲ್ಲ ಸೂಕ್ಷ್ಮ ಮತಗಟ್ಟೆಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗುತ್ತಿತ್ತು. ಈ ಬಾರಿ ಪ್ರತಿ ಮತಗಟ್ಟೆಯಲ್ಲೂ ಸಿ.ಸಿ.ಟಿ.ವಿ. ಕ್ಯಾಮೆರಾ ವೆಬ್‌ಕಾಸ್ಟಿಂಗ್ ಕಣ್ಗಾವಲು ಇರಲಿದೆ ಎಂದು ರಾಜ್ಯ ಚುನಾವಣಾ ಆಯುಕ್ತ ಸಂಗ್ರೇಶಿ ಹೇಳಿದರು.

ಹಿಂದೆಲ್ಲ ಮತಪೆಟ್ಟಿಗೆಗಳನ್ನೇ ಹೊತ್ತೊಯ್ದ ಪ್ರಕರಣಗಳು ನಡೆದಿವೆಯಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಹೊತ್ತುಕೊಂಡು ಹೋಗುವವರಿಗೆ ಮತ ಪೆಟ್ಟಿಗೆ, ಮತಯಂತ್ರ ಅನ್ನುವ ವ್ಯತ್ಯಾಸ ಇರುವುದಿಲ್ಲ. ಅಂತಹ ಪ್ರಕರಣಗಳಿಗೆ ಅವಕಾಶ ಇಲ್ಲದಂತೆ ಜನರು, ಪಕ್ಷಗಳು, ಪೊಲೀಸರ ಸಹಕಾರ ಪಡೆದು ನಿರ್ವಹಣೆ ಮಾಡವಷ್ಟು ಆಯೋಗ ಸಮರ್ಥವಾಗಿದೆ. ಕಟ್ಟುನಿಟ್ಟಿನ, ಪಾರದರ್ಶಕ ಚುನಾವಣೆಗೆ ಅಗತ್ಯ ಇರುವಷ್ಟು ಸಿಬ್ಬಂದಿ, ಪೊಲೀಸರನ್ನು ಬಳಕೆ ಮಾಡಲಾಗುತ್ತದೆ. ಮತಪತ್ರ ನಕಲಿಗೂ ಅವಕಾಶ ನೀಡುವುದಿಲ್ಲ. ಹಲವು ಕಠಿಣ ಕ್ರಮಗಳನ್ನು ಅಳವಡಿಸಲಾಗುತ್ತದೆ' ಎಂದರು.

• **ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಬಳಸುವಂತೆ ರಾಜ್ಯ ಸರ್ಕಾರದ ಒತ್ತಡವಿದೆಯಾ?**

ಖಂಡಿತಾ ಯಾರದೇ ಒತ್ತಡವಿಲ್ಲ. ಚುನಾವಣಾ ಆಯೋಗ ರಾಜ್ಯ ಸರ್ಕಾರದ ಅಧೀನ ಸಂಸ್ಥೆಯಲ್ಲ. ಸಾಂವಿಧಾನಿಕ ಸಂಸ್ಥೆ. ರಾಜಕೀಯ ಪಕ್ಷಗಳು ಚುನಾವಣೆಗೆ ಸಂಬಂಧಿಸಿದ ಹಲವು ವಿಷಯಗಳಲ್ಲಿ ಆಯೋಗಕ್ಕೆ ಮನವಿ ಮಾಡುತ್ತವೆ. ಮತಪತ್ರ ಬಳಸುವಂತೆ ಕೆಲ ಪಕ್ಷಗಳು, ಇವಿಎಂ ಬಳಕೆ ಕುರಿತು ಕೆಲ ಪಕ್ಷಗಳ ಪ್ರತಿನಿಧಿಗಳು ಕಚೇರಿಗೆ ಬಂದು ಮನವಿ ಮಾಡಿದ್ದಾರೆ. ಯಾರೇ ಮನವಿ ಮಾಡಿದರೂ ನಿಯಮಗಳಲ್ಲಿರುವ ಅವಕಾಶದಂತೆ ಆಯೋಗ ಕ್ರಮ ಕೈಗೊಳ್ಳುತ್ತದೆ. ಇವಿಎಂ, ಮತಪತ್ರಗಳ ವಿಚಾರದಲ್ಲೂ ಕೂಲಂಕಷ ಪರಿಶೀಲನೆಯ ಬಳಿಕ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಲಾಗಿದೆ. ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಅತ್ಯಂತ ದೊಡ್ಡ ಚುನಾವಣೆ ಗ್ರಾಮ ಪಂಚಾಯಿತಿಗಳ ಚುನಾವಣೆ. 2.97 ಕೋಟಿ ಮತದಾರರು ಭಾಗವಹಿಸುವ ಚುನಾವಣೆಗೆ ಮತಪತ್ರ ಬಳಕೆ ಮಾಡುತ್ತಿದ್ದೇವೆ. ಹಾಗಾಗಿ, ಇತರ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮತಪತ್ರ ಬಳಕೆ ಬಗ್ಗೆ ವಿರೋಧ ವ್ಯಕ್ತ ಮಾಡುವುದು, ವಿವಾದ ಮಾಡುವುದು ಸರಿಯಲ್ಲ. ಇಂತಹ ವಿಚಾರಗಳಲ್ಲಿ ಒತ್ತಡಗಳಿಗೆ ಆಯೋಗ ಮಣಿಯುವುದೂ ಇಲ್ಲ.

## ❖ ವೇತನ ಪರಿಷ್ಕರಣೆಗೆ ಕೇಂದ್ರ ಒಪ್ಪಿಗೆ

**ಸಂದರ್ಭ: ಸರ್ಕಾರಿ ಸ್ವಾಮ್ಯದ ಸಾಮಾನ್ಯ ವಿಮಾ ಕಂಪನಿಗಳು ಮತ್ತು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) ಉದ್ಯೋಗಿಗಳ ವೇತನ ಪರಿಷ್ಕರಣೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್‌ನ ನಿವೃತ್ತ ನೌಕರರ ಪಿಂಚಣಿ ಸಹ ಪರಿಷ್ಕರಣೆ ಮಾಡಲಾಗಿದೆ.**

- ಈ ಪರಿಷ್ಕರಣೆಯಿಂದ 46,322 ಉದ್ಯೋಗಿಗಳು, 23,570 ಪಿಂಚಣಿದಾರರು ಮತ್ತು 23,260 ಕೌಟುಂಬಿಕ ಪಿಂಚಣಿದಾರರಿಗೆ ವೇತನ ಪರಿಷ್ಕರಣೆಯ ಪ್ರಯೋಜನ ದೊರೆಯಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ತಿಳಿಸಿದೆ.
- ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಉದ್ಯೋಗಿಗಳಿಗೆ ಈ ಪರಿಷ್ಕರಣೆಯು 2022ರ ಆಗಸ್ಟ್ 1ರಿಂದ ಅನ್ವಯವಾಗಲಿದೆ.
- ನಬಾರ್ಡ್ ಸಿಬ್ಬಂದಿಗೆ 2022ರ ನ. 1ರಿಂದ ಅನ್ವಯ ಆಗಲಿದೆ.

## ❖ ಡಬ್ಲ್ಯುಎಚ್‌ಒದಿಂದ ಅಮೆರಿಕ ಹೊರಕ್ಕೆ

**ಸಂದರ್ಭ: ವಿಶ್ವ ಆರೋಗ್ಯ ಸಂಸ್ಥೆಯಿಂದ(ಡಬ್ಲ್ಯುಎಚ್‌ಒ) ಹೊರಬರುವ ಪ್ರಕ್ರಿಯೆಯನ್ನು ಅಮೆರಿಕ ಪೂರ್ಣಗೊಳಿಸಿದೆ ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.**

- ಡೊನಾಲ್ಡ್ ಟ್ರಂಪ್ ಅವರು ಕಳೆದ ವರ್ಷ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡವೇಳೆ, 'ಅಮೆರಿಕವು ವಿಶ್ವ ಆರೋಗ್ಯಸಂಸ್ಥೆಯೊಂದಿಗೆ ಹೊಂದಿರುವ 78 ವರ್ಷಗಳ ನಂಟನ್ನು ಕೊನೆಗೊಳಿಸಲಿದೆ' ಎಂದು ಘೋಷಿಸಿದ್ದರು. ಅದು, ಈಗ ಕಾರ್ಯಗತಗೊಂಡಂತಾಗಿದೆ.
- ಸಂಸ್ಥೆಗೆ ಅಮೆರಿಕ ತನ್ನ ಪಾಲಿನ ವಂತಿಗೆಯನ್ನು ಬಾಕಿ ಉಳಿಸಿಕೊಂಡಿದೆ. ಈಮೊತ್ತ 13 ಕೋಟಿಡಾಲರ್ ಗೂ (ಅಂದಾಜು ₹1,200 ಕೋಟಿ) ಹೆಚ್ಚು ಎಂದುಡಬ್ಲ್ಯುಎಚ್‌ಒಹೇಳಿದೆ.
- 'ಈ ಬೆಳವಣಿಗೆ ಹಲವು ಸಮಸ್ಯೆಗಳಿಗೆ ಕಾರಣವಾಗಲಿದೆ.ವಿವಿಧ ದೇಶಗಳಲ್ಲಿ ಕಂಡುಬರುವ ಸೋಂಕು/ರೋಗಗಳ ಕುರಿತು ಅಧ್ಯಯನ ಕೈಗೊಳ್ಳಲು, ಔಷಧಿ/ಲಸಿಕೆ ಅಭಿವೃದ್ಧಿಪಡಿಸುವುದಕ್ಕೆ ಅಮೆರಿಕದ ವಿಜ್ಞಾನಿಗಳಿಗೆ ಹಾಗೂ ಔಷಧ ಕಂಪನಿಗಳಿಗೆ ಕಷ್ಟವಾಗಲಿದೆ' ಎಂದುಜಾರ್ಜ್‌ಟೌನ್ ವಿಶ್ವವಿದ್ಯಾಲಯದ ಸಾರ್ವಜನಿಕ ಆರೋಗ್ಯಕಾನೂನು ತಜ್ಞ ಲಾರೆನ್ಸ್ ಗಾಸ್ಟಿನ್ ಹೇಳಿದ್ದಾರೆ.

## ❖ ವೆನೆಜುವೆಲಾ: ತೈಲ ಮಸೂದೆ ಚರ್ಚೆ

**ಸಂದರ್ಭ: ತೈಲದ ಮೇಲೆ ರಾಷ್ಟ್ರೀಯ ಹಿಡಿತ ಸಡಿಲಿಸುವ ಮಸೂದೆಯ ಕುರಿತ ಚರ್ಚೆಯನ್ನು ವೆನೆಜುವೆಲಾ ಗುರುವಾರ ಆರಂಭಿಸಿತು.**

- ಸಮಾಜವಾದಿ ನಾಯಕ ಹ್ಯೂಗೋ ಚಾವೆಜ್ ಅವರು 2007ರಲ್ಲಿ ತೈಲೋದ್ಯಮವನ್ನು ರಾಷ್ಟ್ರೀಕರಣಗೊಳಿ-ಸಿದ ನಂತರ ಮೊದಲ ಬಾರಿಗೆ ಈ ಕುರಿತ ಚರ್ಚೆನಡೆದಿದೆ.
- ಈ ಮಸೂದೆಯು ತೈಲ ಉದ್ಯಮದಲ್ಲಿ ಖಾಸಗಿ ಕಂಪನಿಗಳಿಗೆ ಹೂಡಿಕೆ ಮಾಡಲು ಮತ್ತು ಹೂಡಿಕೆ ವಿವಾದಗಳಿಗೆ ಅಂತರರಾಷ್ಟ್ರೀಯ ಮಧ್ಯಸ್ಥಿಕೆಯನ್ನು ಸ್ಥಾಪಿಸಲು ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ.
- ವೆನೆಜುವೆಲಾದ ಅಧ್ಯಕ್ಷರಾಗಿದ್ದ ನಿಕೋಲಸ್ ಮಡೂರೊ ಅವರನ್ನು ಈ ತಿಂಗಳ ಆರಂಭದಲ್ಲಿ ಟ್ರಂಪ್ ಆಡಳಿತವು ಸೆರೆ ಹಿಡಿದಿತ್ತು.

**------------------------------------------ಶುಭವಂದನೆಗಳು----------------------------------------**

Dr. Rajkumar IAS/KAS Academy